| 1. | BHAVINI– ಕಲ್ಪಕಂ (500 MWe) | ಭಾರತೀಯ ನಭಿಕ್ಯ ವಿದ್ಯುತ್ ನಿಗಮ ಲಿಮಿಟೆಡ್ | 500 Mwe | 84.4 | ಈ ಯೋಜನೆಯು ಏಪ್ರಿಲ್–2019 ರಲ್ಲಿ ವಾಣಿಜ್ಯ ಉಪಯೋಗಕ್ಕಾಗಿ ಲಭ್ಯವಾಗಲಿದೆ. ಯೋಜನೆಯ ಕಾಮಗಾರಿ ಪ್ರಗತಿಯಲಿದೆ. |
| 2. | ಕೂಡಗಿ, ಶಾಖೋತ್ಪನ್ನ ವಿದ್ಯುತ್ ಯೋಜನೆ | ಎನ್.ಟಿ.ಪಿ.ಸಿ. (National thermal Power Corporation) | ಹಂತ–1 3 X800<br>ಹಂತ–2 2X800 | 1200<br>800 | ಬಿಜಾಪುರ ಜಿಲ್ಲಯ ಕೂಡಗಿಯಲ್ಲಿ ಶಾಖೋತ್ಪನ್ನ ಯೋಜನೆಯು ಸ್ಥಾಪನೆಯಾಗಲಿದ್ದು ಮೊದಲ ಹಂತದಲ್ಲಿ 3X800 ಮೆ.ವ್ಯಾ ಘಟಕಗಳು ಕಾರ್ಯಾರಂಭ ಮಾಡಿರುತ್ತದೆ.<br>ಎರಡನೆಯ ಹಂತದಲ್ಲಿ ಸ್ಥಾಪನೆಯಾಗ ಬೇಕಿದ್ದ (2 X 800 ಮೆ.ವ್ಯಾ) ಕಲ್ಲಿದ್ದಲು ಆಧಾರಿತ ಘಟಕಗಳ ಬದಲಾಗಿ ಸಂಯೋಜಿತ ಪವನ ಮತ್ತು ಸೌರ ಮೂಲ ಆಧಾರಿತ ಘಟಕಗಳನ್ನು ಸ್ಥಾಪಿಸಲು ಎನ್.ಟಿ.ಪಿ.ಸಿಯು ಘಟಕ ಫಲಾನುಭವಿಗಳ ಅನುಮತಿಯನ್ನು ಕೋರಿದೆ |
| 5. | ಕೈಗಾ ಅಣು ವಿದ್ಯುತ್ ಸ್ಥಾವರದ ಘಟಕ–5 ಮತ್ತು 6ರ ವಿಸ್ತರಣೆ | ಎನ್.ಪಿ.ಸಿ.ಐ.ಎಲ್. (Nuclear Power Corporation of India limited) | 2X700 | 700 | ಕೇಂದ್ರ ಸರ್ಕಾರವು ಈಗಾಗಲೇ ಕರ್ನಾಟಕ ರಾಜ್ಯದಲ್ಲಿರುವ ಕೈಗಾದ 4X220 ಮೆ.ವ್ಯಾ ಸಾಮರ್ಥ್ಯದ ಅಣುವಿದ್ಯುತ್ ಸ್ಥಾವರದಲ್ಲಿ 5 ಮತ್ತು 6 ನೇ ಘಟಕಗಳ (2X700 ಮೆ.ವ್ಯಾ) ವಿಸ್ತರಣಾ ಯೋಜನೆಯ ಸಾಧ್ಯತೆಗಳನ್ನು ಪರಿಶೀಲಿಸಿದೆ. ಕೇಂದ್ರ ಸರ್ಕಾರದ ಸಚಿವ ಸಂಪುಟವು ಕೈಗಾದಲ್ಲಿ 2X700 ಮೆ.ವ್ಯಾ ಹೆಚ್ಚುವರಿ ಅಣುವಿದ್ಯುತ್ ಘಟಕಗಳ ಸ್ಥಾಪನೆ ಮಾಡಲು ತಾತ್ವಿಕವಾಗಿ ಅನುಮತಿ ನೀಡಿದೆ. ಈ ಯೋಜನೆಯನ್ನು ಕೇಂದ್ರ ಸರ್ಕಾರದ NPCIL (ನ್ಯೂಕ್ಲಿಯರ್ ಪವರ್ ಕಾರ್ಪೋರೇಷನ್ ಆಫ್ ಇಂಡಿಯ ಲಿಮಿಟೆಡ್) ಸಂಸ್ಥೆಯು ಅನುಷ್ಠಾನಗೊಳಿಸಲಿದ್ದು, ಯೋಜನೆಯ ಪ್ರಗತಿಯು ಆಡಳಿತಾತ್ಮಕ ಅನುಮೋದನೆ ಮತ್ತು ಕೇಂದ್ರ ಸರ್ಕಾರದ ಆರ್ಥಿಕ ನೆರವು ದೊರೆಯುವುದರ ಮೇಲೆ ಅವಲಂಬಿಸಿದೆ. |

| | | | | | |
|---|---|---|---|---|---|
| 6. | ನಿಡ್ಡೋಡಿ ಅಲ್ಟ್ರಾ ಮೆಗಾ ಪವರ್ ಪ್ರಾಜೆಕ್ಟ್ | PFC | 4000 | ಅಂದಾಜು 2000 | ಮಂಗಳೂರು ತಾಲ್ಲೂಕಿನ ಮೂಡಬಿದ್ರೆ ಹೋಬಳಿಯ ನಿಡ್ಡೋಡಿಯಲ್ಲಿ ಯೋಜನೆಯನ್ನು ಸ್ಥಾಪಿಸಲು ಉದ್ದೇಶಿಸಲಾಗಿದ್ದು ಅಗತ್ಯ ಭೂಸ್ವಾಧೀನ ಪ್ರಕ್ರಿಯೆಯನ್ನು ಕೆ.ಐ.ಎ.ಡಿ.ಬಿ ಯವರಿಂದ ಪ್ರಾರಂಭವಾಗಬೇಕಾಗಿರುತ್ತದೆ. |
| 7 | ಗುಲ್ಬರ್ಗಾ ಶಾಖೋತ್ಪನ್ನ ವಿದ್ಯುತ್ ಯೋಜನೆ | ಕೇಸ್-2 ಬಿಡ್ ಅಡಿಯಲ್ಲಿ ಟೆಂಡರ್ ಮುಖಾಂತರ ಆಯ್ಕೆಯಾಗುವ ಸಂಸ್ಥೆ | 2X660 | 1320 | ಯೋಜನೆಗಾಗಿ 1601.13 ಎಕರೆ ಜಮೀನನ್ನು ಭೂಸ್ವಾದೀನ ಮಾಡಿಕೊಳ್ಳಲಾಗಿದೆ. ನೀರಿನ ಹಂಚಿಕೆಯನ್ನು ಪಡೆಯಲಾಗಿದ್ದು, ಅರಣ್ಯ ಇಲಾಖೆಯ ನಿರಪೇಕ್ಷಣೆ ಪಡೆದಿದ್ದು ಮತ್ತು ಪರಿಸರ ಇಲಾಖೆಯ ಅನುಮತಿ ಪಡೆಯಬೇಕಾಗಿರುತ್ತದೆ. 1601.13 ಎಕರೆ ಜಮೀನಿನಲ್ಲಿ 50 ಎಕರೆ ಜಮೀನನ್ನು ಕೆಪಿಟಿಸಿಎಲ್ ಗೆ 400 ಕೆವಿ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸಲು ನೀಡಲಾಗಿದೆ.<br>ಯೋಜನೆಯನ್ನು ಪಿಸಿಕೆಎಲ್ ನಿಂದ ಕರ್ನಾಟಕ ವಿದ್ಯುತ್ ನಿಗಮ ನಿಯಮಿತಕ್ಕೆ ಹಸ್ತಾಂತರಿಸಲು ಕರ್ನಾಟಕ ಸರ್ಕಾರದ ಇಂಧನ ಇಲಾಖೆಯು ಸೂಚನೆ ನೀಡಿದ್ದು, ತೆಗೆದು ಕೊಳ್ಳಬೇಕಾದ ಅಗತ್ಯ ಕ್ರಮದ ಬಗ್ಗೆ ಸ್ಪಷ್ಟೀಕರಣ ಹಾಗೂ ಮುಂದುವರಿದ ಆದೇಶವನ್ನು ನೀಡಲು ಇಂಧನ ಇಲಾಖೆಯನ್ನು ಕೋರಲಾಗಿದೆ. |
| 8. | ಘಟಪ್ರಭಾ ಶಾಖೋತ್ಪನ್ನ ವಿದ್ಯುತ್ ಯೋಜನೆ: ಬೆಳಗಾವಿ ಜಿಲ್ಲೆ | ಕೇಸ್-2 ಬಿಡ್ ಅಡಿಯಲ್ಲಿ ಟೆಂಡರ್ ಮುಖಾಂತರ ಆಯ್ಕೆಯಾಗುವ ಸಂಸ್ಥೆ | 2X660 | 1320 | ಘಟಪ್ರಭಾ ಯೋಜನೆಗಾಗಿ ಸರ್ಕಾರವು 03ನೇ ಜೂನ್ 2009ರ ಆದೇಶದ ಪ್ರಕಾರ ವಂಟಮುರಿ ಗ್ರಾಮದಲ್ಲಿ 1300 ಎಕರೆ ಜಾಗವನ್ನು ಸ್ವಾಧೀನ ಪಡಿಸಿಕೊಳ್ಳಲು ಸೂಚಿಸಲಾಗಿತ್ತು, ಧಾರವಾಡ ಸರ್ಕ್ಯೂಟ್ ಬೆಂಚ್ ನ್ಯಾಯಾಲಯದಿಂದ ಭೂಸ್ವಾಧೀನಕ್ಕೆ ತಡೆಯಾಜ್ಞೆ ನೀಡಲಾಗಿರುತ್ತದೆ. ಆದುದ್ದರಿಂದ, ಉಚ್ಛ ನ್ಯಾಯಾಲಯದಿಂದ ಭೂಸ್ವಾದೀನಕ್ಕೆ ತಡೆಯಾಜ್ಞೆ ಇರುವುದರಿಂದ ಈ ಯೋಜನೆಯ ಪ್ರಗತಿಯು ಪ್ರಸ್ತುತ ಸ್ಥಗಿತಗೊಂಡಿದೆ. |

| ಕ್ರ ಸಂ | ವಿದ್ಯುತ್ ಸ್ಥಾವರದ ಹೆಸರು ಮತ್ತು ಸ್ಥಳ | ಯೋಜನೆಯನ್ನು ಕೈಗೆತ್ತಿಗೊಂಡ ಸಂಸ್ಥೆಯ ಹೆಸರು | ಯೋಜನೆಯ ಒಟ್ಟು ಸಾಮರ್ಥ್ಯ (ಮೆ.ವಾ. ಗಳಲ್ಲಿ) | ಕರ್ನಾಟಕ ರಾಜ್ಯದ ಖಚಿತ ಪಾಲು (ಮೆ.ವಾ. ಗಳಲ್ಲಿ) | ಷರಾ |
|---|---|---|---|---|---|
| 9. | ರಾಮಗುಂಡಂ ವಿಸ್ತಾರ ಯೋಜನೆ | ಎನ್.ಟಿ.ಪಿ.ಸಿ. (National thermal Power Corporation) | 2X660 | 50% | ಈ ಯೋಜನೆಯ ವಿದ್ಯುತ್ ಖರೀದಿ ಒಪ್ಪಂದಕ್ಕೆ ಸಹಿ ಮಾಡಲು ಸೂಕ್ತ ದಿನಾಂಕವನ್ನು ನಿಗದಿ ಪಡಿಸಬೇಕೆಂದು ಎನ್.ಟಿ.ಪಿ.ಸಿ.ರವರಿಗೆ ಪತ್ರವನ್ನು ಬರೆಯಲಾಗಿದೆ. ಆದರೆ ಆದರೆ ದಿನಾಂಕ 05.03.2016 ರಲ್ಲಿ ನಡೆದ 29ನೇ SRPC ಸಭೆಯ ನಡುವಳಿ ಪ್ರಕಾರ ಈ ಯೋಜನೆಯನ್ನು ತೆಲಂಗಾಣ ರಾಜ್ಯ ಯೋಜನೆಯೆಂದು ಪರಿಗಣಿಸಲಾಗಿದೆ. ಈ ಮಾಹಿತಿಯನ್ನು ರಾಜ್ಯ ಸರ್ಕಾರದ ಗಮನಕ್ಕೆ ತಂದಿದ್ದು ಯೋಜನೆಯ ಹಂಚಿಕೆಯ ಪ್ರಮಾಣದ ಬಗ್ಗೆ ರಾಜ್ಯ ಸರ್ಕಾರವು ಕೇಂದ್ರ ವಿದ್ಯುತ್ ಮಂತ್ರಾಲಯವನ್ನು ಹಂಚಿಕೆಯ ಪ್ರಮಾಣದ ಮಾಹಿತಿ ನೀಡಲು ಮನವಿ ಮಾಡಿರುತ್ತದೆ. |
| 10. | ನೈವೇಲಿ ಲಿಗ್ನೈಟ್ ನಿಯಮಿತದ ಎರಡನೇ ಹಂತದ, ಎರಡನೇ ವಿಸ್ತರಣೆ | NLC (ನೈವೇಲಿ ಲಿಗ್ನೈಟ್ ನಿಯಮಿತ) | 2X500 | – | ಈ ಯೋಜನೆಯಿಂದ ಕೇಂದ್ರ ವಿದ್ಯುತ್ ಮಂತ್ರಾಲಯದ ನಿಯಮಾನುಸಾರ ಹಂಚಿಕೆ ಪಡೆಯಲಿದ್ದು ವಿದ್ಯುತ್ ಖರೀದಿ ಒಪ್ಪಂದಕ್ಕೆ ಸಹಿ ಮಾಡವ ಕುರಿತು ಇನ್ನೂ ನಿರ್ಧಾರ ತೆಗದು ಕೊಳ್ಳಬೇಕಾಗಿರುತ್ತದೆ. |
| 11. | ಚೆಯ್ಯೂರು ಅಲ್ಟ್ರಾ ಮೆಗಾ ಪವರ್ ಪ್ರಾಜೆಕ್ಟ್ | PFC | 4000 | 800 | ತಮಿಳುನಾಡಿನ ಚೆಯ್ಯೂರು ಅಲ್ಟ್ರಾ ಮೆಗಾ ಪವರ್ ಪ್ರಾಜೆಕ್ಟ್ ಗೆ ಎಂ.ಓ.ಯು. ಅನ್ನು ದಿನಾಂಕ: 05ನೇ ಸೆಪ್ಟಂಬರ್ 2013 ರಂದು ಸಹಿ ಮಾಡಲಾಗಿದ್ದು, ಯೋಜನೆಯ ಭೂಸ್ವಾದೀನ ಪ್ರಕ್ರಿಯೆ ಹಾಗೂ ಇತರೆ ಇಲಾಖೆಗಳ ನಿರಪೇಕ್ಷಣ ಅನುಮತಿ ಪಡೆಯುವ ಪ್ರಕ್ರಿಯೆಗಳು ಪ್ರಗತಿಯಲ್ಲಿವೆ. |
| 12. | ಬಿಹಾರ್ ಯುಎಂಪಿಪಿ | PFC | 4000 | 400 | ಸ್ಥಾವರ ನಿರ್ಮಾಣದ ಯೋಜನಾ ಪೂರ್ವಕಾಮಗಾರಿಗಳು ಪ್ರಗತಿಯಲ್ಲಿವೆ. |
| 13. | ಜಾರ್ಖಂಡ್ ರಾಜ್ಯದ ದಿಯೊಘರ್ (Deoghar) ಯು.ಎಂ.ಪಿ.ಪಿ | PFC | 4000 | 300 | ಸ್ಥಾವರ ನಿರ್ಮಾಣದ ಯೋಜನಾ ಪೂರ್ವಕಾಮಗಾರಿಗಳು ಪ್ರಗತಿಯಲ್ಲಿವೆ. |
| 14. | ಪುಡಿಮಡಕಾ ಶಾಖೋತ್ಪನ್ನ ವಿದ್ಯುತ್‌ಯೋಜನೆ | ಎನ್.ಟಿ.ಪಿ.ಸಿ. | 4000 | ಅಂದಾಜು 600 | ದಿನಾಂಕ 05-03-2016 ರಲ್ಲಿ ನಡೆದ 29ನೇ SRPC ಸಭೆಯ ನಡುವಳಿ ಪ್ರಕಾರ 85% ಹಂಚಿಕೆ ಆಂಧ್ರಪ್ರದೇಶಕ್ಕೆ ನೀಡಿರುತ್ತಾರೆ. ಈ ಮಾಹಿತಿಯನ್ನು ರಾಜ್ಯ ಸರ್ಕಾರದ ಗಮನಕ್ಕೆ ತಂದಿದ್ದು ಯೋಜನೆಯಿಂದ ಹಂಚಿಕೆಯನ್ನು ಪಡೆಯಲು ಕೇಂದ್ರಕ್ಕೆ ಮನವಿ ಮಾಡಲು ಕೋರಲಾಗಿದೆ. |

| ಕ್ರ ಸಂ | ವಿದ್ಯುತ್ ಸ್ಥಾವರದ ಹೆಸರು ಮತ್ತು ಸ್ಥಳ | ಯೋಜನೆಯನ್ನು ಕೈಗೆತ್ತಿಗೊಂಡ ಸಂಸ್ಥೆಯ ಹೆಸರು | ಯೋಜನೆಯ ಒಟ್ಟು ಸಾಮರ್ಥ್ಯ (ಮೆ.ವಾ. ಗಳಲ್ಲಿ) | ಕರ್ನಾಟಕ ರಾಜ್ಯದಖಚಿತ ಪಾಲು (ಮೆ.ವಾ. ಗಳಲ್ಲಿ) | ಷರಾ |
|---|---|---|---|---|---|
| 15. | NNTPS (ನೈವೇಲಿ ಲಿಗ್ನೈಟ್ ನಿಯಮಿತ) ಶಾಖೋತ್ಪನ್ನ ವಿದ್ಯುತ್ ಯೋಜನೆ, ನೈವೇಲಿ, ತಮಿಳುನಾಡು | NLC (ನೈವೇಲಿ ಲಿಗ್ನೈಟ್ ನಿಯಮಿತ) | 1000 | 70 | ಯೋಜನೆಯ ವಿದ್ಯುತ್ ಖರೀದಿ ಒಪ್ಪಂದಕ್ಕೆ ಸಹಿ ಮಾಡಿದ್ದು ಡಿಸೆಂಬರ್ – 2018 ರಲ್ಲಿ ಯೋಜನೆಯು ಕಾರ್ಯಗತವಾಗಬಹುದೆಂದು ಅಂದಾಜಿಸಲಾಗಿದೆ. |
| 16. | ಸಿರ್ಕಾಳಿ ಶಾಖೋತ್ಪನ್ನ ವಿದ್ಯುತ್‌ಯೋಜನೆ ನಾಗಪಟ್ಟಿಣಂ ಜಿಲ್ಲೆ ತಮಿಳು ನಾಡು | NLC (ನೈವೇಲಿ ಲಿಗ್ನೈಟ್ ನಿಯಮಿತ) | 1980 | 396 | NLC ಅವರ ಪತ್ರದ ದಿನಾಂಕ 01-02-2017 ರ ಪ್ರಕಾರ ಸಿರ್ಕಾಳಿ ಶಾಖೋತ್ಪನ್ನ ವಿದ್ಯುತ್ ಯೋಜನೆಯು ಈಗಿನ ಪರಿಸ್ಥಿತಿಯಲ್ಲಿ ಆರ್ಥಿಕವಾಗಿ ಕಾರ್ಯ ಸಾಧ್ಯವಿಲ್ಲವೆಂದು ಹೇಳಿದ್ದು ಇದರ ಬದಲಾಗಿ ಒಡಿಶಾದ ತಾಲಬಿರ ಕಲ್ಲಿದ್ದಲು ಗಣಿಗಳ ಸಮೀಪ ಹೊಸ ಶಾಖೋತ್ಪನ್ನ ವಿದ್ಯುತ್ ಸ್ಥಾವರ ಸ್ಥಾಪಿಸಲು ಉದ್ದೇಶಿಸಿದೆ. ಈ ಯೋಜನೆಯಿಂದ ವಿದ್ಯುತ್ ಖರೀದಿ ಒಪ್ಪಂದ ಮಾಡಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿದೆ. |

# ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1286

ಸದಸ್ಯರ ಹೆಸರು : ಶ್ರೀ ಹರೀಶ್ ಪೂಂಜಾ (ಬೆಳ್ತಂಗಡಿ)

ಉತ್ತರಿಸಬೇಕಾದ ದಿನಾಂಕ : 18-12-2018

ಉತ್ತರಿಸುವ ಸಚಿವರು : ಮುಖ್ಯಮಂತ್ರಿಯವರು

***

| | ಪ್ರಶ್ನೆ | ಉತ್ತರ |
|---|---|---|
| ಅ) | ಬೆಸ್ಕಾಂ ಕಂಪನಿಯಲ್ಲಿ ಸುಮಾರು 15-20 ವರ್ಷಗಳಿಂದ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿದ್ದ ನೌಕರರನ್ನು ಖಾಯಂಗೊಳಿಸಲು ಆದೇಶವಾಗಿರುತ್ತದೆಯೇ; | ದಿನಾಂಕ: 20-09-2016 ರಂದು ನಡೆದ 78ನೇ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ನಿರ್ದೇಶಕರ ಮಂಡಳಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದನ್ವಯ ದಿನಾಂಕ: 01-04-2003ಕ್ಕೂ ಹಿಂದೆ ಗ್ಯಾಂಗ್‌ಮನ್/ ಬಿಲ್ಲು ಹಂಚಿಕೆದಾರರಾಗಿ 6 ವರ್ಷಗಳ ಸೇವೆ ಪೂರೈಸಿರುವ 313 ಬಿಲ್ಲು ಹಂಚಿಕೆದಾರರು/ ಗ್ಯಾಂಗ್‌ಮನ್‌ಗಳನ್ನು ಪ್ರೊಬೇಷನರಿ ಮಜ್ದೂರ್‌ಗಳನ್ನಾಗಿ ಪರಿವರ್ತಿಸಿ ಖಾಯಂಗೊಳಿಸಲಾಗಿದೆ. |
| ಆ) | ಹಾಗಿದ್ದಲ್ಲಿ, ಇದೇ ನಿಯಮದಡಿ ಮೆಸ್ಕಾಂ ಕಂಪನಿಯಲ್ಲಿ ಪ್ರಸ್ತುತ 43 ಮಂದಿ ನೌಕರರು 15-20 ವರ್ಷಗಳಿಂದ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿದ್ದು, ಈ ನೌಕರರನ್ನು ಖಾಯಂಗೊಳಿಸಲು ಇರುವ ತೊಂದರೆಗಳೇನು? | ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ ತಾತ್ಕಾಲಿಕ ಮಾಪಕ ಓದುಗರು, ತಮ್ಮನ್ನು ಖಾಯಂಗೊಳಿಸುವಂತೆ ಕೋರಿ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ W.P.10556/2005, W.P.4854/2008 ಮತ್ತು W.P.5174/2008 ರಲ್ಲಿ ಅರ್ಜಿ ಸಲ್ಲಿಸಿದ್ದು, ಅರ್ಜಿಯು ತಿರಸ್ಕೃತಗೊಂಡಿರುತ್ತದೆ.<br>ಈ ಬಗ್ಗೆ ಸದರಿ ನೌಕರರು W.A.3949/2010, W.A.4332-49/2010 ಹಾಗೂ 4015-4033/2010ರಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಮಾನ್ಯ ನ್ಯಾಯಾಲಯದ ಆದೇಶದಲ್ಲಿ ಸದರಿ ನೌಕರರನ್ನು ಖಾಯಂಗೊಳಿಸಲು ಅವಕಾಶವಿಲ್ಲವೆಂದು ಹಾಗೂ ಸದರಿ ಹುದ್ದೆಗೆ ನೇಮಕಾತಿ ಮಾಡುವ ಸಂದರ್ಭದಲ್ಲಿ ಮೇಲ್ಮನವಿದಾರರ ಈ ತಾತ್ಕಾಲಿಕ ಸೇವೆಯನ್ನು ಪರಿಗಣಿಸಿ ಇತರೆ ಅಭ್ಯರ್ಥಿಗಳೊಂದಿಗೆ ಸ್ಪರ್ಧಿಸಲು ನಿರ್ದೇಶನ ನೀಡಿರುತ್ತದೆ.<br>ಸದರಿ ನೌಕರರು ಪುನಃ ತಮ್ಮನ್ನು ಖಾಯಂಗೊಳಿಸಲು W.P.42603-639/2016ರಲ್ಲಿ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಮಾನ್ಯ ನ್ಯಾಯಾಲಯವು ಗುತ್ತಿಗೆ ಮಾಪಕ ಓದುಗರು ತಮ್ಮ ಸೇವೆಯನ್ನು ಖಾಯಂಗೊಳಿಸುವಂತೆ ಕೋರಿ ದಿನಾಂಕ 19-10-2015 ರಂದು ಸಲ್ಲಿಸಿದ ಮನವಿಯ ಬಗ್ಗೆ ಕ್ರಮಕೈಗೊಳ್ಳುವಂತೆ ಸೂಚಿಸಿದ ಹಿನ್ನೆಲೆಯಲ್ಲಿ ಅವರ ಸೇವೆಯನ್ನು ಖಾಯಂಗೊಳಿಸಲು ಅವಕಾಶವಿಲ್ಲವೆಂದು ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯ ಪತ್ರ ಸಂಖ್ಯೆ: 14213-250 ದಿನಾಂಕ 01-01-2018ರಲ್ಲಿ ಅರ್ಜಿದಾರರಿಗೆ ಹಿಂಬರಹ ನೀಡಲಾಗಿರುತ್ತದೆ.<br>ಮುಂದುವರೆದು, ಮೇಲ್ಮನವಿ ಪ್ರಕರಣವು ಪ್ರಸ್ತುತ ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇರುತ್ತದೆ. |

| | | |
|---|---|---|
| ಇ) | ಗುಲ್ಬರ್ಗಾ ಕಂಪನಿಯಲ್ಲಿ ತಾತ್ಕಾಲಿಕವಾಗಿ ಕೆಲಸ ನಿರ್ವಹಿಸುತ್ತಿದ್ದ ನೌಕರರನ್ನು ಅವರುಗಳ ಅರ್ಹತೆಗೆ ತಕ್ಕಂತೆ ವಾಹನ ಚಾಲಕರಾಗಿ ನೇಮಕಾತಿ ಮಾಡಲಾಗಿದ್ದು, ಅಂತೆಯೇ ಮೆಸ್ಕಾಂ ಕಂಪನಿಯಲ್ಲಿ ಇದೇ ಮಾದರಿಯಲ್ಲಿ ಅವರಿಗೆ ಅವಕಾಶ ನೀಡದಿರಲು ಕಾರಣವೇನು? | ರಾಜ್ಯ ಸರ್ಕಾರವು ದಿನಾಂಕ 25-02-2004ರ ಪತ್ರದಲ್ಲಿ, ಕವಿಪ್ರನಿನಿಯಲ್ಲಿ ದಿನಾಂಕ 01-04-2003ಕ್ಕು ಹಿಂದೆ ಕಾರ್ಯ ನಿರ್ವಹಿಸುತ್ತಿದ್ದ 7528 ತಾತ್ಕಾಲಿಕ ಗ್ಯಾಂಗ್‌ಮನ್‌ಗಳನ್ನು ಮಾತ್ರ ವಿಲೀನಗೊಳಿಸಲು ಅನುಮೋದನೆಯನ್ನು ನೀಡಿರುತ್ತದೆ.<br><br>ದಿನಾಂಕ 02-07-2003 ರಂದು ಜರುಗಿದ ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿಯ ಮಂಡಳಿಯ ನಿರ್ದೇಶಕರ ಸಭೆಯಲ್ಲಿ, 31-03-2002ಕ್ಕೂ ಹಿಂದೆ ಅಂದರೆ 1999 ರಿಂದಲೂ ತಾತ್ಕಾಲಿಕವಾಗಿ ವಾಹನ ಚಾಲಕರಾಗಿ ಸೇವೆ ಸಲ್ಲಿಸುತ್ತಿದ್ದವರನ್ನು ಗ್ಯಾಂಗ್‌ಮನ್‌ಗಳಾಗಿ ಪರಿವರ್ತಿಸಲು ಅನುಮೋದನೆಯನ್ನು ನೀಡಿ, ಅವರುಗಳನ್ನು ಸೆಪ್ಟಂಬರ್ 2003 ನಲ್ಲಿ ಗ್ಯಾಂಗ್‌ಮನ್‌ಗಳನ್ನಾಗಿ ಪರಿವರ್ತಿಸಲು ಆದೇಶ ಮಾಡಲಾಗಿದೆ. ಆದರೆ ತಾಂತ್ರಿಕ ಕಾರಣಗಳಿಂದ ಸದರಿ ಗ್ಯಾಂಗ್‌ಮನ್‌ಗಳನ್ನು ಖಾಯಂಗೊಳಿಸಲು ಸಾಧ್ಯವಾಗಿರಲಿಲ್ಲ.<br><br>ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿಯ ಮಂಡಳಿಯ ನಿರ್ದೇಶಕರ 70 ಮತ್ತು 71ನೇ ಸಭೆಯಲ್ಲಿ ಚರ್ಚಿಸಿ, ಸದರಿ ವಾಹನ ಚಾಲಕರನ್ನು ಗ್ಯಾಂಗ್‌ಮನ್‌ಗಳನ್ನಾಗಿ ಪರಿವರ್ತನೆಗೊಂಡ ಆರ್ಥಿಕ ವರ್ಷದಿಂದ ಪ್ರೊಬೆಷನರಿ ಮಜ್ದೂರ್‌ಗಳನ್ನಾಗಿ ಪರಿವರ್ತಿಸಿ ನಂತರ ಮೂರು ವರ್ಷಗಳ ಸತತವಾಗಿ ತೃಪ್ತಿಕರ ಸೇವೆಯನ್ನು ಸಲ್ಲಿಸಿರುವವರನ್ನು ಕಿರಿಯ ಮಾರ್ಗದಾಳುಗಳನ್ನಾಗಿ ಪರಿವರ್ತಿಸಿ ವಿಲೀನಗೊಳಿಸಲು ತೀರ್ಮಾನಿಸಿ, ಕವಿಪ್ರನಿನಿಯ ಅನುಮೋದನೆಗಾಗಿ ದಿನಾಂಕ 24-08-2018 ರಂದು ಸಲ್ಲಿಸಲಾಯಿತು.<br><br>ಕವಿಪ್ರನಿನಿ ವತಿಯಿಂದ ಸದರಿ ಪ್ರಸ್ತಾವನೆಯನ್ನು ಪರಿಗಣಿಸಿ, ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿಯ ವತಿಯಿಂದ ಅಧಿಕೃತ ಜ್ಞಾಪನ ಪತ್ರವನ್ನು ಹೊರಡಿಸಲು ದಿನಾಂಕ 28-09-2018 ಅನುಮೋದನೆ ನೀಡಲಾಗಿದೆ.<br>ಅದರಂತೆ, ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿಯ ದಿನಾಂಕ 20-10-2018 ರ ಪತ್ರದನ್ವಯ ಸದರಿಯವರನ್ನು ಕಿರಿಯ ಮಾರ್ಗದಾಳುಗಳನ್ನಾಗಿ ಖಾಯಂಗೊಳಿಸಲಾಗಿದೆ.<br>ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿದ್ದ ಗ್ಯಾಂಗ್‌ಮನ್‌ಗಳನ್ನು ಮಾತ್ರ ಖಾಯಂಗೊಳಿಸಲಾಗಿದೆ. |

ಸಂಖ್ಯೆ: ಇಎನ್ 146 ಪಿಪಿಎಂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

# ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2111
ಸದಸ್ಯರ ಹೆಸರು : ಶ್ರೀ ಟಿ.ಡಿ.ರಾಜೇಗೌಡ (ಶೃಂಗೇರಿ)
ಉತ್ತರಿಸಬೇಕಾದ ದಿನಾಂಕ : 18-12-2018
ಉತ್ತರಿಸುವ ಸಚಿವರು : ಮುಖ್ಯಮಂತ್ರಿಯವರು

***

| | ಪ್ರಶ್ನೆ | ಉತ್ತರ |
|---|---|---|
| ಅ) | ಶೃಂಗೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಕೊಪ್ಪ, ನರಸಿಂಹರಾಜಪುರ ಮತ್ತು ಶೃಂಗೇರಿ ತಾಲ್ಲೂಕುಗಳು ಮಲೆನಾಡಿನ ಭೂ ಭಾಗಗಳಾಗಿದ್ದು, ಈ ಪ್ರದೇಶಗಳಲ್ಲಿ ವಿದ್ಯುತ್ ಕೊರತೆಯನ್ನು ನೀಗಿಸಲು ಸರ್ಕಾರದಿಂದ ಶಾಶ್ವತ ಪರಿಹಾರವನ್ನು ಒದಗಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? (ವಿವರ ಒದಗಿಸುವುದು) | ಶೃಂಗೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಕೊಪ್ಪ, ನರಸಿಂಹರಾಜಪುರ ಮತ್ತು ಶೃಂಗೇರಿ ತಾಲ್ಲೂಕುಗಳಲ್ಲಿ ವಿದ್ಯುತ್ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಕ.ವಿ.ಪ್ರ.ನಿ.ನಿ ವತಿಯಿಂದ ಕೈಗೊಳ್ಳಲಾದ ಕ್ರಮಗಳ ವಿವರಗಳು ಕೆಳಕಂಡಂತಿವೆ.<br>• ಶೃಂಗೇರಿ 33/11 ಕೆ.ವಿ. ವಿದ್ಯುತ್ ಉಪಕೇಂದ್ರಕ್ಕೆ ಬಾಳೆಹೊನ್ನೂರು 66/33/11 ಕೆ.ವಿ. ವಿದ್ಯುತ್ ಉಪಕೇಂದ್ರದಿಂದ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.<br>• ಶೃಂಗೇರಿ ತಾಲ್ಲೂಕಿನ ಶೃಂಗೇರಿಯಲ್ಲಿ ಹಾಲಿ ಇರುವ 33/11 ಕೆವಿ ವಿದ್ಯುತ್ ಉಪಕೇಂದ್ರವನ್ನು 1*10 ಎಂವಿಎ 110/11 ಕೆವಿ ವಿದ್ಯುತ್ ಉಪಕೇಂದ್ರವನ್ನಾಗಿ ಉನ್ನತೀಕರಿಸಲು ಹಾಗೂ 25 ಕಿ.ಮೀ. ಗಳ ಶೃಂಗೇರಿ-ಕಮ್ಮರಡಿ 110 ಕೆ.ವಿ. ಪ್ರಸರಣ ಮಾರ್ಗ ನಿರ್ಮಾಣದ ಕಾಮಗಾರಿಗಳ ಪ್ರಸ್ತಾವನೆಯು ಕ.ವಿ.ಪ್ರ.ನಿ.ನಿ.ಯ ತಾಂತ್ರಿಕ ಸಮನ್ವಯ ಸಮಿತಿ ಸಭೆಯಲ್ಲಿ ಅನುಮೋದನೆಗೊಂಡಿರುತ್ತದೆ.<br>ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಶೃಂಗೇರಿಯಲ್ಲಿ ಸ್ಥಳದ ಲಭ್ಯತೆ ಇಲ್ಲದಿರುವುದರಿಂದ ಹಾಗೂ 110 ಕೆ.ವಿ. ಪ್ರಸರಣ ಮಾರ್ಗ ರಚನೆಗೆ ಅರಣ್ಯ ಇಲಾಖೆಯ ಅನುಮತಿ ಅವಶ್ಯವಿದ್ದು, ವಿಳಂಬವಾಗುವುದರಿಂದ, ಮ.ವಿ.ಸ.ಕಂ. ವತಿಯಿಂದ ಕೋರಿಕೆ ಮೇರೆಗೆ ಹಾಲಿ ಕಮ್ಮರಡಿ 110/11 ಕೆ.ವಿ. ವಿದ್ಯುತ್ ಉಪಕೇಂದ್ರದಲ್ಲಿ 1*10 ಎಂ.ವಿ.ಎ. 110/33 ಕೆ.ವಿ. ಪರಿವರ್ತಕ ಅಳವಡಿಸಿ, ಕಮ್ಮರಡಿಯಿಂದ 33 ಕೆ.ವಿ. ಮಾರ್ಗವನ್ನು ಹಾಲಿ ಶೃಂಗೇರಿ 33/11 ಕೆ.ವಿ. ವಿದ್ಯುತ್ ಉಪಕೇಂದ್ರದವರೆಗೆ ರಚಿಸಲು ತಾಂತ್ರಿಕ ಸಮಿತಿ ಸಭೆಯಲ್ಲಿ ಅನುಮೋದನೆಗೊಂಡಿದ್ದು, ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಇದರಿಂದ ಶೃಂಗೇರಿ ವಿದ್ಯುತ್ ಉಪಕೇಂದ್ರಕ್ಕೆ ಎರಡು ಮಾರ್ಗಗಳಿಂದ ವಿದ್ಯುತ್ ಪೂರೈಕೆಯಾಗಿ ಅಡಚಣೆ ಕಡಿಮೆಯಾಗುತ್ತದೆ.<br>ಹಾಲಿ ಇರುವ ಚಿಕ್ಕಮಗಳೂರು-ಬಾಳೆಹೊನ್ನೂರು 66 ಕೆ.ವಿ. ಹಳೆಯದಾಗಿದ್ದು, ಹಾಲಿಯಿರುವ ಏಕ ಮಾರ್ಗವನ್ನು 66 ಕೆ.ವಿ. ದ್ವಿಮುಖ ಮಾರ್ಗ ರಚನೆ ಹಾಗೂ ಹಾಲಿ ಇರುವ ವಾಹಕ ತೆಗೆದು ಕಯೋಟ್ ವಾಹಕ ಅಳವಡಿಸುವ ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ಎಲ್.ಓ.ಐ. ನೀಡಲಾಗಿದ್ದು, ಕಾಮಗಾರಿಗಳನ್ನು ಪ್ರಾರಂಭಿಸಬೇಕಾಗಿರುತ್ತದೆ.<br>ನರಸಿಂಹರಾಜಪುರ ತಾಲ್ಲೂಕಿನ ಮುತ್ತಿನಕೊಪ್ಪ 110 ಕೆವಿ ವಿದ್ಯುತ್ ಉಪಕೇಂದ್ರದಲ್ಲಿ 1*10 ಎಂವಿಎ 110/11 ಕೆವಿ ಪರಿವರ್ತಕವನ್ನು 1*20 ಎಂವಿಎ 110/11 ಕೆವಿ ಪರಿವರ್ತಕವನ್ನಾಗಿ ಬದಲಾಯಿಸುವ ಪ್ರಸ್ತಾವನೆಯು ಅನುಮೋದನೆಗೊಂಡಿದ್ದು, ಟೆಂಡರ್ ಪ್ರಕ್ರಿಯೆಯು ಪ್ರಗತಿಯಲ್ಲಿದೆ. |

| | | |
|---|---|---|
| | | ಈ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡ ನಂತರ ಶೃಂಗೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಶಾಶ್ವತ ವಿದ್ಯುತ್ ಪೂರೈಕೆಗೆ ಸಹಕಾರಿಯಾಗುತ್ತದೆ.<br>ಸದರಿ ಕ್ಷೇತ್ರದಲ್ಲಿ ಸಮರ್ಪಕ ವಿದ್ಯುತ್ ಸರಬರಾಜಿಗಾಗಿ ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ವತಿಯಿಂದ ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.<br>1. ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲ್ಲೂಕು ಕೊರ್ಡಿಹಿತ್ಲು 33/11 ಕೆವಿ ವಿದ್ಯುತ್ ಉಪಕೇಂದ್ರದ ನವೀಕರಣ/ ಆಧುನೀಕರಣ, ಹಳೆಯದಾದ 11 ಕೆವಿ ಸ್ವಿಚ್‌ಗೇರ್ ಬದಲಾವಣೆ ಮತ್ತು ಲಿಲೋ ಅರೇಂಜ್‌ಮೆಂಟ್ ಮಾಡುವ ಕಾಮಗಾರಿಯು ಪ್ರಗತಿಯಲ್ಲಿದೆ.<br>2. ಕೊಪ್ಪ ವಿಭಾಗ, ಬಾಳೆಹೊನ್ನೂರು ಉಪವಿಭಾಗದ ಮುತ್ತಿನಕೊಪ್ಪ ಶಾಖಾ ವ್ಯಾಪ್ತಿಯಲ್ಲಿ ಹಾಲಿ 11 ಕೆ.ವಿ. ಮುತ್ತಿನಕೊಪ್ಪ ಫೀಡರ್‌ನ 11 ಕೆ.ವಿ. ಮಾರ್ಗವನ್ನು ಹೊಡಿಯಾಲ ಇಂದ ಮಲ್ಲಂದೂರು ವರೆಗೆ ರೀ–ಕಂಡಕ್ಟರಿಂಗ್ ಹಾಗೂ ರೀ–ಅಲೈನ್‌ಮೆಂಟ್ ಮಾಡುವ ಕಾಮಗಾರಿಗೆ ಅವಾರ್ಡ್ ನೀಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ.<br>3. ಕೊಪ್ಪ ವಿಭಾಗದ ವ್ಯಾಪ್ತಿಯಲ್ಲಿ ಬಾಳೆಹೊನ್ನೂರು 66/33/11 ಕೆ.ವಿ ವಿದ್ಯುತ್ ಉಪಕೇಂದ್ರದಿಂದ ಶೃಂಗೇರಿ 33/11 ಕೆ.ವಿ ವಿದ್ಯುತ್ ಉಪಕೇಂದ್ರದವರೆಗೆ ಹಾಲಿ ಇರುವ ಮಾರ್ಗವನ್ನು ನವೀಕರಣಗೊಳಿಸಲು ಸರ್ವೆ ಕಾರ್ಯವನ್ನು ಕೈಗತ್ತಿಕೊಳ್ಳಲಾಗಿದೆ.<br>4. ಕಮ್ಮರಡಿ 110 ಕೆ.ವಿ ವಿದ್ಯುತ್ ಉಪಕೇಂದ್ರದಿಂದ ಶೃಂಗೇರಿ 33/11 ವಿದ್ಯುತ್ ಉಪಕೇಂದ್ರದವರಗೆ ಕೊಯೋಟ್ ವಾಹಕ ಉಪಯೋಗಿಸಿ ಡಬಲ್ ಸರ್ಕ್ಯೂಟ್ ಮಾರ್ಗ ವಿಸ್ತರಣೆ ಮಾಡಲು ಸರ್ವೆ ಕಾಮಗಾರಿಗೆ ಟೆಂಡರ್ ಪ್ರಕ್ರಿಯ ಪ್ರಗತಿಯಲ್ಲಿದೆ.<br>5. ಐ.ಪಿ.ಡಿ.ಎಸ್. ಯೋಜನೆಯಡಿಯಲ್ಲಿ ಶೃಂಗೇರಿ, ಕೊಪ್ಪ ಮತ್ತು ಎನ್.ಆರ್.ಪುರ ಪಟ್ಟಣಗಳಲ್ಲಿ 33/11 ಕೆ.ವಿ. ತಲಾ (1*5 ಎಂ.ವಿ.ಎ) GIS ವಿದ್ಯುತ್ ಉಪ ಕೇಂದ್ರಗಳನ್ನು ಸ್ಥಾಪಿಸಲು ವಿಸ್ತೃತ ಯೋಜನಾ ವರದಿಗಳನ್ನು ತಯಾರಿಸಲಾಗಿದೆ.<br>66/33/11 ಕೆ.ವಿ. ಬಾಳೆಹೊನ್ನೂರು ವಿದ್ಯುತ್ ಉಪಕೇಂದ್ರದಿಂದ ಕಳಸ ವಿದ್ಯುತ್ ಉಪಕೇಂದ್ರದವರೆಗೆ 33 ಕೆ.ವಿ. ಸಿಂಗಲ್ ಸರ್ಕ್ಯೂಟ್ ಮಾರ್ಗ ನಿರ್ಮಿಸುವ ಕಾಮಗಾರಿ ಪ್ರಗತಿಯಲ್ಲಿದೆ. |

ಸಂಖ್ಯೆ: ಇಎನ್ 165 ಪಿಪಿಎಂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

# ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1250
ಸದಸ್ಯರ ಹೆಸರು : ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ. (ಮಡಿಕೇರಿ)
ಉತ್ತರಿಸಬೇಕಾದ ದಿನಾಂಕ : 18-12-2018
ಉತ್ತರಿಸುವ ಸಚಿವರು : ಮುಖ್ಯಮಂತ್ರಿಯವರು

***

| | ಪ್ರಶ್ನೆ | ಉತ್ತರ |
|---|---|---|
| ಅ) | ಮಡಿಕೇರಿ ಜಿಲ್ಲೆಯಲ್ಲಿ ಎಷ್ಟು ಪವರ್ ಸ್ಟೇಷನ್ ಕಾರ್ಯಾಚರಣೆಯಲ್ಲಿದೆ; ಕಳೆದ ಮೂರು ವರ್ಷಗಳಿಂದ ಎಷ್ಟು ಹೊಸ ಪವರ್ ಸ್ಟೇಷನ್ ಮಂಜೂರಾತಿಯಾಗಿದೆ; ಯಾವುವು; | ಕೊಡಗು ಜಿಲ್ಲೆಯಲ್ಲಿ ಪ್ರಸ್ತುತ 11 ವಿವಿಧ ಸಾಮರ್ಥ್ಯದ ವಿದ್ಯುತ್ ಉಪಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ವಿವರಗಳು ಕೆಳಕಂಡಂತಿವೆ. (see table below) |
| ಆ) | ಮಾದಾಪುರ, ಹಾನಗಲ್ಲು ಕೂಡಿಗೆ ವ್ಯಾಪ್ತಿಯಲ್ಲಿ ವಿದ್ಯುತ್ ತೊಂದರೆ ಹೆಚ್ಚಾಗಿದ್ದು ಈ ಭಾಗಕ್ಕೆ ಹೊಸದಾಗಿ ಪವರ್ ಸ್ಟೇಷನ್ ಮಂಜೂರಾಗಿದ್ದರೂ ಸಹ ಈವರೆವಿಗೂ ಕಾಮಗಾರಿ ಕೈಗೊಳ್ಳದಿರಲು ಕಾರಣವೇನು; | ಕೊಡಗು ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಒಟ್ಟು 7 ಹೊಸ ವಿದ್ಯುತ್ ಉಪಕೇಂದ್ರಗಳ ಸ್ಥಾಪನೆಯ ಪ್ರಸ್ತಾವನೆಗಳು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ತಾಂತ್ರಿಕ ಸಮನ್ವಯ ಸಮಿತಿ ಸಭೆಯಲ್ಲಿ ಅನುಮೋದನೆಗೊಂಡಿದ್ದು, ವಿವರಗಳನ್ನು **ಅನುಬಂಧದಲ್ಲಿ** ನೀಡಿದೆ. |

| | |
|---|---|
| 220 ಕೆ.ವಿ. | 01 |
| 66 ಕೆ.ವಿ. | 06 |
| 33 ಕೆ.ವಿ. | 04 |
| **ಒಟ್ಟು** | **11** |

| | ಪ್ರಶ್ನೆ | ಉತ್ತರ |
|---|---|---|
| ಇ) | ಕಳೆದ ಮೂರು ವರ್ಷಗಳಲ್ಲಿ ವಿದ್ಯುತ್ ದುರಸ್ತಿಗಾಗಿ ಹೊಸ ಕಂಬಗಳ ಅಳವಡಿಕೆ ಹಾಗೂ ಇನ್ನಿತರ ಉದ್ದೇಶಕ್ಕೆ ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಅನುದಾನ ಬಿಡುಗಡೆಗೊಳಿಸಲಾಗಿದೆ; ಇದರಲ್ಲಿ ಕೇಂದ್ರ ಅನುದಾನವೆಷ್ಟು; ರಾಜ್ಯದ ಅನುದಾನವೆಷ್ಟು; (ಕ್ಷೇತ್ರವಾರು ವಿವರ ನೀಡುವುದು) | ದುರಸ್ಥಿ ಹಾಗೂ ನಿರ್ವಹಣೆ ಕಾಮಗಾರಿಗಳಿಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ. ಕೊಡಗು ಜಿಲ್ಲೆಯಲ್ಲಿ ದುರಸ್ಥಿ ಹಾಗೂ ನಿರ್ವಹಣೆಗಾಗಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಬಿಡುಗಡೆಯಾದ ಮೊತ್ತದ ತಾಲ್ಲೂಕುವಾರು ವಿವರಗಳು ಕೆಳಕಂಡಂತಿವೆ: |

| ಕ್ರ ಸಂ | ತಾಲ್ಲೂಕು | 2015-16 ಬಿಡುಗಡೆಯಾದ ಮೊತ್ತ ರೂ. ಲಕ್ಷಗಳಲ್ಲಿ | 2016-17 ಬಿಡುಗಡೆಯಾದ ಮೊತ್ತ ರೂ. ಲಕ್ಷಗಳಲ್ಲಿ | 2017-18 ಬಿಡುಗಡೆಯಾದ ಮೊತ್ತ ರೂ. ಲಕ್ಷಗಳಲ್ಲಿ | 2018-19 (ನವೆಂಬರ್-18ರ ಅಂತ್ಯಕ್ಕೆ) ಬಿಡುಗಡೆಯಾದ ಮೊತ್ತ ರೂ. ಲಕ್ಷಗಳಲ್ಲಿ |
|---|---|---|---|---|---|
| 1 | ಮಡಿಕೇರಿ | 54.03 | 69.50 | 46.05 | 177.4 |
| 2 | ಸೋಮವಾರ ಪೇಟೆ | 67.77 | 71.00 | 57.75 | 130.00 |
| 3 | ವಿರಾಜಪೇಟೆ | 110.95 | 51.83 | 89.56 | 66.40 |
| | ಒಟ್ಟು | 232.75 | 193.33 | 193.36 | 373.8 |

| | ಪ್ರಶ್ನೆ | ಉತ್ತರ |
|---|---|---|
| ಈ) | ಬಡವರಿಗೆ ಉಚಿತ ವಿದ್ಯುತ್ ಸೌಲಭ್ಯ ನೀಡುವ ಯೋಜನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ ಯಾವ ಮಾನದಂಡ ಆಧಾರದಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು; ಅರ್ಜಿದಾರರು ಅರ್ಜಿ ಸಲ್ಲಿಸಿ, ಎಷ್ಟು ಸಮಯಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತದೆ? (ಸಂಪೂರ್ಣ ವಿವರ ನೀಡುವುದು) | ಬಡವರಿಗೆ ಉಚಿತ ವಿದ್ಯುತ್ ಸೌಲಭ್ಯ ನೀಡಲು ಕೇಂದ್ರ ಸರ್ಕಾರದ ಈ ಕೆಳಕಂಡ ಯೋಜನೆಗಳು ಜಾರಿಯಲ್ಲಿದೆ.<br>1. ದೀನ ದಯಾಳ್ ಉಪಾಧ್ಯಾಯ ಗ್ರಾಮೀಣ ವಿದ್ಯುದೀಕರಣ ಯೋಜನೆ<br>2. ಸೌಭಾಗ್ಯ ಯೋಜನೆ<br>ಸದರಿ ಯೋಜನೆಗಳ ಅನುಷ್ಠಾನಕ್ಕೆ ಕೇಂದ್ರ ಸರ್ಕಾರದ ಇಂಧನ ಸಚಿವಾಲಯವು ಮಾರ್ಗಸೂಚಿಗಳನ್ನು ಹೊರಡಿಸಿರುತ್ತದೆ. ಸದರಿ ಮಾರ್ಗಸೂಚಿಯಲ್ಲಿರುವ ಮಾನದಂಡಗಳನ್ನು ಪರಿಗಣಿಸಿ ಫಲಾನುಭವಿಗಳನ್ನು ಗುರುತಿಸಲಾಗುತ್ತಿದೆ. |
| ಉ) | ವಿದ್ಯುತ್ ಇಲಾಖೆಯಿಂದ ಗ್ರಾಹಕರಿಗೆ ನೀಡುವ ಸೌಲಭ್ಯಗಳು ಯಾವುವು? (ಪೂರ್ಣ ವಿವರ ನೀಡುವುದು) | |

ದೀನ ದಯಾಳ್ ಉಪಾಧ್ಯಾಯ ಗ್ರಾಮೀಣ ವಿದ್ಯುದೀಕರಣ ಯೋಜನೆಯಡಿ ವಿದ್ಯುತ್ ಸಂಪರ್ಕವಿಲ್ಲದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಮನೆಗಳಿಗೆ ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಗಳು ಸರ್ವೇ ಮಾಡಿ ವಿದ್ಯುತ್ ಸರಬರಾಜು ಕಂಪನಿಗಳಿಗೆ ಒದಗಿಸಿದ ಪಟ್ಟಿಯನ್ವಯ ಉಚಿತ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತಿದೆ.

"ಸೌಭಾಗ್ಯ" (ಪ್ರಧಾನಮಂತ್ರಿ ಸಹಜ್ ಬಿಜಲಿ ಹರ್‌ಘರ್ ಯೋಜನೆ) "ಸರ್ವರಿಗೂ ವಿದ್ಯುತ್" ನೀಡುವ ಸಲುವಾಗಿ ವಿದ್ಯುತ್ ರಹಿತ ವಾಸದ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಈ ಯೋಜನೆಯಡಿ ಡಿ.ಡಿ.ಯು.ಜಿ.ಜೆ.ವೈ ಯೋಜನೆಯಡಿಯಲ್ಲಿ ಸೇರ್ಪಡೆಗೊಳ್ಳದ ಯಾವುದೇ ವಿದ್ಯುತ್ ರಹಿತ ಬಿ.ಪಿ.ಎಲ್ (BPL) ಮನೆಗಳಿಗೆ ಉಚಿತವಾಗಿ ವಿದ್ಯುತ್ ಸಂಪರ್ಕವನ್ನು ಹೊಂದಲು ಅರ್ಹರಾಗಿರುತ್ತಾರೆ.

ಮುಂದುವರೆದು, ಬಿ.ಪಿ.ಎಲ್ (BPL) ಮನೆಗಳಲ್ಲದೆ, ಎ.ಪಿ.ಎಲ್ ವಿದ್ಯುತ್ ರಹಿತ ಮನೆಗಳೂ ಸಹ ಈ ಯೋಜನೆಯಡಿ ವಿದ್ಯುತ್ ಸಂಪರ್ಕವನ್ನು ರೂ.500 ನ್ನು ಪಾವತಿಸುವುದರ ಮೂಲಕ ಪಡೆಯಬಹುದಾಗಿದೆ. ಸದರಿ ರೂ.500 ನ್ನು ಮಾಸಿಕ ವಿದ್ಯುತ್ ಬಿಲ್ಲಿನೊಂದಿಗೆ ರೂ.50 ರಂತೆ ಸಮಾನ ಕಂತುಗಳಲ್ಲಿ 10 ತಿಂಗಳಲ್ಲಿ ಪಾವತಿಸಲು ಅವಕಾಶವಿರುತ್ತದೆ. ವಿದ್ಯುತ್ ರಹಿತ ಮನೆಗಳಿಗೆ ಸದರಿ ಯೋಜನೆಯಡಿ Service main, ಮಾಪಕ, single point wiring ಮತ್ತು ಇತರೆ ಸಂಬಂಧಿತ ಪರಿಕರಗಳೊಂದಿಗೆ ಒಂದು LED Bulb ಜೊತೆಯೊಂದಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು.

- ಈಗಾಗಲೇ ವಿದ್ಯುತ್ ಸಂಪರ್ಕವನ್ನು ಹೊಂದಿ, ಬಾಕಿ ಪಾವತಿಸದೆ ವಿದ್ಯುತ್ ನಿಲುಗಡೆ ಮಾಡಲಾಗಿರುವ ಮನೆಗಳಿಗೆ ಈ ಯೋಜನೆಯ ಸೌಲಭ್ಯ ಪಡೆದುಕೊಳ್ಳಲು ಅವಕಾಶವಿರುವುದಿಲ್ಲ.
- ತಾತ್ಕಾಲಿಕ ಬಿಡಾರಗಳಲ್ಲಿ ವಾಸಿಸುವ ವಲಸಿಗ ಕುಟುಂಬಗಳಿಗೆ ಈ ಯೋಜನೆಯ ಸೌಲಭ್ಯವಿರುವುದಿಲ್ಲ.
- ಜಮೀನು / ಹೊಲಗಳಲ್ಲಿ ಕಟ್ಟಲಾಗಿರುವ Farm House ಗಳಿಗೆ ಈ ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದಿಲ್ಲ.
- ಒಂದು ಮನೆಗೆ ಒಂದು ವಿದ್ಯುತ್ ಸಂಪರ್ಕವನ್ನು ಮಾತ್ರ ಕಲ್ಪಿಸಲಾಗುವುದು.

ಕೆ.ಇ.ಆರ್.ಸಿ ನಿಬಂಧನೆಗಳ ಪ್ರಕಾರ ಅರ್ಜಿದಾರರು ಅರ್ಜಿ ಸಲ್ಲಿಸಿ ಈ ಮೇಲಿನಂತೆ ವಿದ್ಯುತ್ ಸಂಪರ್ಕ ಪಡೆದುಕೊಳ್ಳಬಹುದಾಗಿರುತ್ತದೆ

ಸಂಖ್ಯೆ: ಇಎನ್ 142 ಪಿಪಿಎಂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ.

ವಿಧಾನಸಭೆಯ ಮಾನ್ಯ ಸದಸ್ಯರಾದ ಶ್ರೀ ಅಪ್ಪಚ್ಚು ರಂಜನ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1250ಕ್ಕೆ
ಅನುಬಂಧ

**ಕೊಡಗು ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ತಾಂತ್ರಿಕ ಸಮನ್ವಯ ಸಮಿತಿ ಸಭೆಯಲ್ಲಿ ಅನುಮೋದನೆಗೊಂಡಿರುವ ಹೊಸ ವಿದ್ಯುತ್ ಉಪಕೇಂದ್ರಗಳ ವಿವರಗಳು**

| ಕ್ರಮ ಸಂಖ್ಯೆ. | ತಾಲ್ಲೂಕು | ಕಾಮಗಾರಿಯ ಹೆಸರು | ಷರಾ |
|---|---|---|---|
| 1 | ಸೋಮವಾರಪೇಟೆ | ಹಾನಗಲ್ಲು ಶೆಟ್ಟಿಹಳ್ಳಿ ಗ್ರಾಮದಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ 33/11 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು 66/11 ಕೆ.ವಿ. ವಿದ್ಯುತ್ ಉಪಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವುದು. | ಪ್ರಸ್ತಾವನೆಯು ಕ.ವಿ.ಪ್ರ.ನಿ.ಯ ತಾಂತ್ರಿಕ ಸಮನ್ವಯ ಸಮಿತಿಯಲ್ಲಿ ಅನುಮೋದನೆಗೊಂಡಿದ್ದು, ವಿಸ್ತೃತ ಯೋಜನಾ ವರದಿಯು ಅನುಮೋದನೆ ಹಂತದಲ್ಲಿದೆ. |
| 2 | ಸೋಮವಾರಪೇಟೆ | ಕೂಡಿಗೆಯಲ್ಲಿ 2*8 ಎಂ.ವಿ.ಎ. 66/11 ಕೆ.ವಿ. ವಿದ್ಯುತ್ ಉಪಕೇಂದ್ರ ಸ್ಥಾಪನೆ. | ಪ್ರಸ್ತಾವನೆಯು ಕ.ವಿ.ಪ್ರ.ನಿ.ಯ ತಾಂತ್ರಿಕ ಸಮನ್ವಯ ಸಮಿತಿಯಲ್ಲಿ ಅನುಮೋದನೆಗೊಂಡಿದ್ದು, ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ಲಭ್ಯವಿರುವ ಸರ್ಕಾರಿ ಜಮೀನು ಮಂಜೂರಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. |
| 3 | ವಿರಾಜಪೇಟೆ | ಮೂರ್ನಾಡುನಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ 33/11 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು 66/11 ಕೆ.ವಿ. ವಿದ್ಯುತ್ ಉಪಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವುದು. | ಪ್ರಸ್ತಾವನೆಯು ಕ.ವಿ.ಪ್ರ.ನಿ.ಯ ತಾಂತ್ರಿಕ ಸಮನ್ವಯ ಸಮಿತಿಯಲ್ಲಿ ಅನುಮೋದನೆಗೊಂಡಿದ್ದು, ಲೈನ್ ಸರ್ವೇ ನಡೆಸಲು ಟೆಂಡರ್ ಕರೆಯಲಾಗಿದೆ. |
| 4 | ವಿರಾಜಪೇಟೆ | ಸಿದ್ದಾಪುರದಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ 33/11 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು 66/11 ಕೆ.ವಿ. ವಿದ್ಯುತ್ ಉಪಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವುದು. | ಪ್ರಸ್ತಾವನೆಯು ಕ.ವಿ.ಪ್ರ.ನಿ.ಯ ತಾಂತ್ರಿಕ ಸಮನ್ವಯ ಸಮಿತಿಯಲ್ಲಿ ಅನುಮೋದನೆಗೊಂಡಿದ್ದು, ಅಗತ್ಯವಿರುವ ಜಮೀನು ಗುರುತಿಸಬೇಕಾಗಿದೆ. |
| 5 | ವಿರಾಜಪೇಟೆ | ಶ್ರೀಮಂಗಲದಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ 33/11 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು 66/11 ಕೆ.ವಿ. ವಿದ್ಯುತ್ ಉಪಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವುದು. | ಪ್ರಸ್ತಾವನೆಯು ಕ.ವಿ.ಪ್ರ.ನಿ.ಯ ತಾಂತ್ರಿಕ ಸಮನ್ವಯ ಸಮಿತಿಯಲ್ಲಿ ಅನುಮೋದನೆಗೊಂಡಿದ್ದು, ವಿಸ್ತೃತ ಯೋಜನಾ ವರದಿಯು ಅನುಮೋದನೆ ಹಂತದಲ್ಲಿದೆ. |
| 6 | ಮಡಿಕೇರಿ | ಭಾಗಮಂಡಲದಲ್ಲಿ (ಕೊಪಟ್ಟಿ) 1*8 ಎಂ.ವಿ.ಎ, 66/11 ಕೆ.ವಿ. ವಿದ್ಯುತ್ ಉಪಕೇಂದ್ರ ಸ್ಥಾಪನೆ | ಪ್ರಸ್ತಾವನೆಯು ಕ.ವಿ.ಪ್ರ.ನಿ.ಯ ತಾಂತ್ರಿಕ ಸಮನ್ವಯ ಸಮಿತಿಯಲ್ಲಿ ಅನುಮೋದನೆಗೊಂಡಿದ್ದು, ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ಲಭ್ಯವಿರುವ ಸರ್ಕಾರಿ ಜಮೀನು ಮಂಜೂರಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. |
| 7 | ಸೋಮವಾರಪೇಟೆ | ಕೊಡ್ಲಿಪೇಟೆಯಲ್ಲಿ 1*8 ಎಂ.ವಿ.ಎ, 66/11 ಕೆ.ವಿ. ವಿದ್ಯುತ್ ಉಪಕೇಂದ್ರ ಸ್ಥಾಪನೆ | ಪ್ರಸ್ತಾವನೆಯು ಕ.ವಿ.ಪ್ರ.ನಿ.ಯ ತಾಂತ್ರಿಕ ಸಮನ್ವಯ ಸಮಿತಿಯಲ್ಲಿ ಅನುಮೋದನೆಗೊಂಡಿದ್ದು, ಅಗತ್ಯವಿರುವ ಜಮೀನು ಗುರುತಿಸಬೇಕಾಗಿದೆ. |

# ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1299
ಸದಸ್ಯರ ಹೆಸರು : ಶ್ರೀ ವೆಂಕಟರೆಡ್ಡಿ ಮುದ್ನಾಳ್ (ಯಾದಗಿರಿ)
ಉತ್ತರಿಸಬೇಕಾದ ದಿನಾಂಕ : 18-12-2018
ಉತ್ತರಿಸುವ ಸಚಿವರು : ಮುಖ್ಯಮಂತ್ರಿಯವರು

***

| | ಪ್ರಶ್ನೆ | ಉತ್ತರ |
|---|---|---|
| ಅ) | ಯಾದಗಿರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸರ್ಕಾರದಿಂದ ನೀಡಲಾಗುವ ಗಂಗಾ ಕಲ್ಯಾಣ ಯೋಜನೆಗೆ ವಿದ್ಯುತ್ ಸಂಪರ್ಕ ಒದಗಿಸಲು ವಿದ್ಯುತ್ ಕಂಬಗಳ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಕಳೆದ 3 ವರ್ಷಗಳಲ್ಲಿ ಯಾದಗಿರಿ ವಿಧಾಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ 479 ಫಲಾನುಭವಿಗಳ ಪಂಪ್‌ಸೆಟ್‌ಗಳಿಗೆ 3308 ಕಂಬಗಳನ್ನು ಅಳವಡಿಸಿ, ವಿದ್ಯುತ್ ಸಂಪರ್ಕ ನೀಡಲಾಗಿದ್ದು, ವಿವರಗಳು ಈ ಕೆಳಕಂಡತಿವೆ. |
| ಆ) | ಬಂದಿದ್ದಲ್ಲಿ, ಸರ್ಕಾರವು ಕೈಗೊಂಡಿರುವ ಕ್ರಮಗಳೇನು? | (see table and text below) |

| ವರ್ಷ | ಗಂಗಾ ಕಲ್ಯಾಣ ಯೋಜನೆಯಡಿ ವಿದ್ಯದೀಕರಣ ಗೊಳಿಸಲಾದ ಪಂಪ್‌ಸೆಟ್‌ಗಳ ಸಂಖ್ಯೆ | ರೈತರ ಪಂಪ್‌ಸೆಟ್‌ಗಳಿಗೆ ಅಳವಡಿಸಲಾದ ಕಂಬಗಳ ಸಂಖ್ಯೆ | ಕಂಬಗಳ ಅಳವಡಿಕೆಗೆ ಖರ್ಚಾದ ಮೊತ್ತ (ಲಕ್ಷ ರೂ.ಗಳಲ್ಲಿ) |
|---|---|---|---|
| 2015-16 | 80 | 515 | 12.54 |
| 2016-17 | 195 | 1365 | 37.50 |
| 2017-18 | 119 | 833 | 22.85 |
| 2018-19 (ಅಕ್ಟೋಬರ್ 18ರ ಅಂತ್ಯಕ್ಕೆ) | 85 | 595 | 16.32 |
| **ಒಟ್ಟು** | **479** | **3308** | **89.21** |

ಗಂಗಾ ಕಲ್ಯಾಣ ಮತ್ತು ಇತರ ಕಾಮಗಾರಿಗಳಿಗೆ ಅವಶ್ಯವಿರುವ ವಿದ್ಯುತ್ ಕಂಬಗಳ ಖರೀದಿ ಸಲುವಾಗಿ ಖರೀದಿ ಅನುದಾನವನ್ನು ಬೇಡಿಕೆಗನುಸಾರ ಬಿಡುಗಡೆಗೊಳಿಸಲಾಗುತ್ತಿದ್ದು, ಕಂಬಗಳ ಕೊರತೆ ಇರದಂತೆ ನೋಡಿಕೊಳ್ಳಲಾಗುತ್ತಿದೆ. ಸದರಿ ಯೋಜನೆಯಡಿ ಬಾಕಿ ಉಳಿದ 165 ಫಲಾನುಭವಿಗಳ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಸಂಖ್ಯೆ: ಇಎನ್ 148 ಪಿಪಿಎಂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ.

# ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1525
ಸದಸ್ಯರ ಹೆಸರು : ಶ್ರೀ ಕೆ.ಶಿವನಗೌಡ ನಾಯಕ್ (ದೇವದುರ್ಗ)
ಉತ್ತರಿಸಬೇಕಾದ ದಿನಾಂಕ : 18-12-2018
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ದೇವದುರ್ಗ ವಿಧಾನಸಭಾ ಕ್ಷೇತ್ರಕ್ಕೆ ಎರಡು ಹೊಸ ಕೇಂದ್ರೀಯ ವಿದ್ಯಾಲಯ ಶಾಲೆಗಳ ಪ್ರಸ್ತಾವನೆಯ ಕಡತ ಸರ್ಕಾರಕ್ಕೆ ಬಂದಿದೆಯೇ; | ಬಂದಿದೆ. |
| ಆ. | ಸಂಬಂಧಪಟ್ಟ ಕಡತವು ಎರಡು ವರ್ಷಗಳಿಂದ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದಕ್ಕೆ ಕಾರಣಗಳೇನು; ಸರ್ಕಾರವು ಕೂಡಲೇ ಈ ಪ್ರಸ್ತಾವನೆಯನ್ನು ತರಿಸಿಕೊಳ್ಳಲು ಯಾವ ಕ್ರಮ ಕೈಗೊಳ್ಳುತ್ತದೆ; | ಸದರಿ ಪ್ರಸ್ತಾವನೆ ಬಗ್ಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯ, ರಾಯಚೂರು ಇವರಿಂದ ಸರ್ಕಾರಕ್ಕೆ ಪೂರ್ಣ ಪ್ರಮಾಣದ ದಾಖಲೆಗಳನ್ನೊಳಗೊಂಡಂತೆ ಪ್ರಸ್ತಾವನೆ ಜೊತೆಗೆ ನಿಗಧಿತ ನಮೂನೆಯಲ್ಲಿ ಮಾಹಿತಿ ಒದಗಿಸದೇ ಇದ್ದ ಕಾರಣ ರಾಯಚೂರು ಜಿಲ್ಲಾಧಿಕಾರಿಗಳಿಗೆ ಸರ್ಕಾರದಿಂದ ಸೂಕ್ತ ಪ್ರಸ್ತಾವನೆ ಹಾಗೂ ಅಗತ್ಯ ಮಾಹಿತಿಗಳನ್ನು ನಿಗದಿತ ನಮೂನೆಯಲ್ಲಿ ಸರ್ಕಾರಕ್ಕೆ ಸಲ್ಲಿಸುವಂತೆ ಕೋರಲಾಗಿದೆ. ಅವರಿಂದ ಪ್ರಸ್ತಾವನೆ ಹಾಗೂ ಅಗತ್ಯ ಮಾಹಿತಿಗಳನ್ನು ನಿಗಧಿತ ನಮೂನೆಯಲ್ಲಿ ಸರ್ಕಾರಕ್ಕೆ ಕಳುಹಿಸಿದ ಕೂಡಲೇ ಸದರಿ ಸ್ಥಳಗಳಲ್ಲಿ ಕೇಂದ್ರೀಯ ವಿದ್ಯಾಲಯಗಳನ್ನು ಪ್ರಾರಂಭಿಸಲು ಜಿಲ್ಲಾಧಿಕಾರಿಗಳು, ಕೇಂದ್ರೀಯ ವಿದ್ಯಾಲಯ ಸಂಘಟನ, ಕಾಮರಾಜ ರಸ್ತೆ, ಬೆಂಗಳೂರು ಇವರಿಗೆ ಸೂಕ್ತ ನಿರ್ದೇಶನವನ್ನು ನೀಡಲಾಗುವುದು. ಈ ಬಗ್ಗೆ ಅಗತ್ಯ ಮಾಹಿತಿಗಳನ್ನು ಕೂಡಲೇ ಒದಗಿಸಲು ರಾಯಚೂರು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗುವುದು. |
| ಇ. | ಸದರಿ ಪ್ರಸ್ತಾವನೆಯನ್ನು ಸಕಾಲದಲ್ಲಿ ಸಲ್ಲಿಸದ ಅಧಿಕಾರಿಗಳ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು; | |
| ಈ. | ಈ ಪ್ರಸ್ತಾವನೆಯನ್ನು ಸಲ್ಲಿಸಿದ್ದಲ್ಲಿ, ಸರ್ಕಾರವು ಕೂಡಲೇ ಪರಿಗಣಿಸಿ ಕ್ರಮ ಕೈಗೊಳ್ಳುವುದೇ? | |

ಇಡಿ 690 ಪಿಜಿಸಿ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ.

# ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2156
ಸದಸ್ಯರ ಹೆಸರು : ಶ್ರೀ ಎಸ್.ಎನ್.ಸುಬ್ಬಾರೆಡ್ಡಿ (ಬಾಗೇಪಲ್ಲಿ)
ಉತ್ತರಿಸಬೇಕಾದ ದಿನಾಂಕ : 18-12-2018
ಉತ್ತರಿಸಬೇಕಾದ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಗ್ರಾಮೀಣ ಪ್ರದೇಶಗಳಲ್ಲಿ ಮಕ್ಕಳ ಪೋಷಕರು ಅವರ ಮಕ್ಕಳನ್ನು ಹೆಚ್ಚಾಗಿ ಖಾಸಗಿ ಶಾಲೆಗಳಿಗೆ ಸೇರಿಸಲು ಮುಂದಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕಾರಣಗಳೇನು; | ಬಂದಿದೆ.<br>1. ಆಂಗ್ಲ ಮಾಧ್ಯಮದ ಒಲವಿನಿಂದಾಗಿ ಪೋಷಕರು ತಮ್ಮ ಮಕ್ಕಳನ್ನು ಹೆಚ್ಚಾಗಿ ಖಾಸಗಿ ಶಾಲೆಗಳಲ್ಲಿ ದಾಖಲು ಮಾಡಲು ಇಚ್ಛಿಸುವುದು.<br>2. ಗ್ರಾಮೀಣ ಭಾಗಗಳಲ್ಲಿ ಖಾಸಗಿ ಶಾಲೆ ತೆರೆಯಲು ಅಗತ್ಯ ವಿಸ್ತೀರ್ಣದ ಭೂಮಿಯ ಲಭ್ಯತೆ.<br>3. ಖಾಸಗಿ ಶಾಲೆಗಳವರು ದಾಖಲಾತಿಗಾಗಿ ಅಬ್ಬರದ ಪ್ರಚಾರ.<br>4. ಖಾಸಗಿ ಶಾಲೆಗಳಲ್ಲಿ ಮಕ್ಕಳನ್ನು ದಾಖಲು ಮಾಡಲು ಪೋಷಕರು ಒಂದು ಪ್ರತಿಷ್ಠೆಯನ್ನಾಗಿ ಭಾವಿಸಿರುವುದು.<br>5. ಖಾಸಗಿ ಶಾಲೆಗಳಲ್ಲಿ ವ್ಯಾಸಂಗ ಮಾಡುವ ಮಕ್ಕಳಿಗೆ ಆಡಳಿತ ಮಂಡಳಿಯು ವಾಹನ ಸೌಕರ್ಯ ಒದಗಿಸಿರುವುದು. |
| ಆ) | ಗ್ರಾಮೀಣ ಭಾಗಗಳಲ್ಲಿ ಖಾಸಗಿ ಶಾಲೆಗಳ ಪ್ರಭಾವ ಹೆಚ್ಚಲು ಕಾರಣಗಳೇನು; | |
| ಇ) | ಸರ್ಕಾರಿ ಶಾಲೆಗಳಲ್ಲಿ ಸಹ ಅಂಗನವಾಡಿ ಕೇಂದ್ರಗಳನ್ನು ವಿಲೀನಗೊಳಿಸಿ ಎಲ್.ಕೆ.ಜಿ. ಯಿಂದ ಶಿಕ್ಷಣ ಪ್ರಾರಂಭ ಮಾಡುವ ಬಗ್ಗೆ ಸರ್ಕಾರದ ನಿಲುವೇನು; | ಸರ್ಕಾರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಶಾಲೆ ತೆರೆಯುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರದ ಪರಿಶೀಲನೆಯಲ್ಲಿದೆ. |
| ಈ) | ಸರ್ಕಾರಿ ಶಾಲೆಗಳಲ್ಲಿ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ಪ್ರಾರಂಭಿಸಲಾಗುವುದೇ; | ಹೌದು.<br>ರಾಜ್ಯದಲ್ಲಿ 1000 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 1ನೇ ತರಗತಿಯಿಂದ ಆಂಗ್ಲ ಮಾಧ್ಯಮದ ತರಗತಿಗಳನ್ನು ಪ್ರಾರಂಭಿಸಲು ಕ್ರಮವಹಿಸಲಾಗಿದೆ. |
| ಉ) | ಹಾಗಿದ್ದಲ್ಲಿ, ಯಾವ ಸಾಲಿನಿಂದ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ಪ್ರಾರಂಭಿಸಲಾಗುವುದು (ವಿವರ ನೀಡುವುದು)? | 2019-20ನೇ ಸಾಲಿನಿಂದ ಪ್ರಾರಂಭಿಸಲು ಉದ್ದೇಶಿಸಲಾಗಿದೆ. |

ಇಡಿ 693 ಪಿಜಿಸಿ 2018.

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

(1)

# ಕರ್ನಾಟಕ ವಿಧಾನ ಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2159 |
| ವಿಧಾನ ಸಭಾ ಸದಸ್ಯರ ಹೆಸರು | : | ಶ್ರೀ ಟಿ.ಡಿ. ರಾಜೇಗೌಡ |
| ಉತ್ತರಿಸುವವರು | : | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 18-12-2018 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | ರಾಜ್ಯದಲ್ಲಿ ಮಕ್ಕಳ ಮತ್ತು ಮಹಿಳೆಯ ರಕ್ಷಣೆಗಾಗಿ ರೂಪಿಸಿರುವ ನೀತಿ, ನಿಯಮಗಳು ಮತ್ತು ಕಾನೂನು ನಿಯಮಗಳು ಯಾವುದು (ವಿವರ ಒದಗಿಸುವುದು) ? | ರಾಜ್ಯದಲ್ಲಿ ಮಕ್ಕಳ ಮತ್ತು ಮಹಿಳೆಯ ರಕ್ಷಣೆಗಾಗಿ ರೂಪಿಸಿರುವ ನೀತಿ, ನಿಯಮಗಳು ಮತ್ತು ಕಾನೂನು ನಿಯಮಗಳು ಈ ಕೆಳಕಂಡಂತಿರುತ್ತದೆ.<br><br>**1) ಬಾಲ ನ್ಯಾಯ (ಮಕ್ಕಳ ರಕ್ಷಣೆ ಮತ್ತು ಪೋಷಣೆ) ಕಾಯ್ದೆ 2015, ಕೇಂದ್ರ ಮಾದರಿ ನಿಯಮಗಳು 2016 .**<br><br>ಬಾಲನ್ಯಾಯ (ಮಕ್ಕಳ ಪಾಲನೆ ಹಾಗೂ ರಕ್ಷಣೆ)ಕಾಯ್ದೆ 2000 ವನ್ನು ಕೇಂದ್ರ ಸರ್ಕಾರವು ರಿಪೀಲ್ ಮಾಡಿ ಹೊಸ ಬಾಲನ್ಯಾಯ (ಮಕ್ಕಳ ಪಾಲನೆ ಹಾಗೂ ರಕ್ಷಣೆ)ಕಾಯ್ದೆ 2015 ಅನ್ನು ಪ್ರಕಟಿಸಿದ್ದು ಸದರಿ ಕಾಯ್ದೆಯು ದಿನಾಂಕ;15.01.2016ರಿಂದ ಜಾರಿಗೆ ಬಂದಿರುತ್ತದೆ.<br><br>ಮುಂದುವರೆದು, ಭಾರತ ಸರ್ಕಾರವು ಬಾಲನ್ಯಾಯ (ಮಕ್ಕಳ ಪಾಲನೆ ಹಾಗೂ ರಕ್ಷಣೆ) ಮಾದರಿ ನಿಯಮಗಳು 2016ನ್ನು ದಿ:21/9/2016 ರಂದು ಜಾರಿಗೆ ತಂದಿರುತ್ತದೆ. ಈ ಕುರಿತು ರಾಜ್ಯ ಸರ್ಕಾರವು ಪ್ರತ್ಯೇಕ ನಿಯಮಗಳನ್ನು ರಚಿಸುವವರೆಗೆ ಕೇಂದ್ರ ಸರ್ಕಾರವು ರಚಿಸಿರುವ ಬಾಲನ್ಯಾಯ (ಮಕ್ಕಳ ಪಾಲನೆ ಹಾಗೂ ರಕ್ಷಣೆ) ಮಾದರಿ ನಿಯಮಗಳು 2016ರ ವ್ಯಾಪ್ತಿಯಲ್ಲಿಯೇ ರಾಜ್ಯದಲ್ಲಿ ಕಾರ್ಯ ನಿರ್ವಹಿಸಲಾಗುತ್ತಿದೆ.<br><br>**2)ಲೈಂಗಿಕ ದೌರ್ಜನ್ಯದಿಂದ ಮಕ್ಕಳನ್ನು ಸಂರಕ್ಷಿಸುವ ಕಾಯ್ದೆ 2012 ಮತ್ತು ನಿಯಮಗಳು (POCSO Act)**<br><br>ಈ ಕಾಯ್ದೆಯು ಮಕ್ಕಳನ್ನು ಲೈಂಗಿಕ ಹಲ್ಲೆ, ಲೈಂಗಿಕ ಕಿರುಕುಳ ಮತ್ತು ಅಶ್ಲೀಲ ವಿಷಯಗಳ ಹಿಂಸೆಗಳಿಂದ ಮಕ್ಕಳನ್ನು ರಕ್ಷಿಸುತ್ತದೆ.<br><br>**3)ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ 2016**<br><br>ಶಾಲೆಗಳಲ್ಲಿ ಮಕ್ಕಳ ಸುರಕ್ಷತೆಗಾಗಿ ಕರ್ನಾಟಕದ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ "ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ 2016" ನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ರಚಿಸಲಾಗಿದೆ.<br><br>ಸದರಿ ನೀತಿಯು ಶೈಕ್ಷಣಿಕ ಸಂಸ್ಥೆಗಳಿಗಾಗಿ ಕಾರ್ಯನಿರ್ವಹಣಾ ಮಾರ್ಗಸೂಚಿಗಳು ಮತ್ತು ಕಾರ್ಯ ವಿಧಾನಗಳನ್ನು ಒಳಗೊಂಡಿದೆ. ಈ ನೀತಿಯನ್ನು ಶಿಕ್ಷಣ, ಪೋಲೀಸ್, ಸಮಾಜ ಕಲ್ಯಾಣ, ನ್ಯಾಯಾಂಗ, ಕಾರ್ಮಿಕ ಇಲಾಖೆ, ಸಾರಿಗೆ ಇಲಾಖೆ, ವಾರ್ತಾ ಇಲಾಖೆ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್, ಹಿಂದುಳಿದ ವರ್ಗಗಳು ಮತ್ತು ಅಲ್ಪ ಸಂಖ್ಯಾತರ ಇಲಾಖೆ, ಮುಂತಾದ 10 ವಿವಿಧ ಇಲಾಖೆಗಳು ಹಾಗೂ ಜಿಲ್ಲಾಡಳಿತ ಮೂಲಕ ಅನುಷ್ಠಾನಗೊಳಿಸುತ್ತವೆ. |

| | | |
|---|---|---|
| | | ಸದರಿ ನೀತಿಯು ಮಕ್ಕಳ ಸಂರಕ್ಷಣೆಯಲ್ಲಿ ನಿರತರಾಗಿರುವ ಭಾಗಿದಾರರುಗಳ ಪಾತ್ರ ಮತ್ತು ಜವಾಬ್ದಾರಿಗಳು ಮತ್ತು ಸಾಂಸ್ಥಿಕ ಹಾಗೂ ಮೂಲಭೂತ ಸೌಕರ್ಯಗಳನ್ನು ಬಲಪಡಿಸುವ ಕುರಿತು ತಿಳಿಸುವುದರೊಂದಿಗೆ ಅದಕ್ಕಾಗಿ ರಾಜ್ಯವು ಒದಗಿಸಿದ ವಿವಿಧ ಸೇವೆಗಳನ್ನು ಪಡೆಯುವ ಬಗ್ಗೆ ಮಾಹಿತಿಯನ್ನು ನೀಡುತ್ತದೆ<br><br>**4)ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರದ ದತ್ತು ಅಧಿಸೂಚನೆ 2017 (Central Adoption Resource Authority (CARA) Adoption Regulations 2017)**<br><br>ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರವು ನೂತನ ದತ್ತು ಮಾರ್ಗಸೂಚಿಯನ್ನು ದಿನಾಂಕ:01.08.2015ರಿಂದ ಜಾರಿಗೊಳಿಸಿದ್ದು, ಅದರನ್ವಯ ದತ್ತು ಕಾರ್ಯಕ್ರಮದ ಅನುಷ್ಠಾನ ಸಂಪೂರ್ಣವಾಗಿ ಆನ್‌ಲೈನ್ ಆಧಾರಿತವಾಗಿದೆ. ಮಕ್ಕಳನ್ನು ದತ್ತು ತೆಗೆದುಕೊಳ್ಳ ಬಯಸುವ ಪೋಷಕರು ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಳ್ಳುವುದರಿಂದ ಮಗುವನ್ನು ಆನ್‌ಲೈನ್‌ನಲ್ಲಿ ನೋಡಿ ಆಯ್ಕೆ ಮಾಡಿಕೊಳ್ಳುವವರೆಗಿನ ಪ್ರಕಿಯೆಯು ಸಂಪೂರ್ಣವಾಗಿ ಆನ್‌ಲೈನ್ ಆಧರಿತವಾಗಿರುತ್ತದೆ.<br><br>ನೂತನ ಬಾಲನ್ಯಾಯ ಕಾಯ್ದೆ 2015ರ ಅನ್ವಯ ದತ್ತು ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಹೊಸ ಅಧ್ಯಾಯವನ್ನು ಅಳವಡಿಸಿದ್ದು, ಅದರನ್ವಯ ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರವು ದತ್ತು ಮಾರ್ಗಸೂಚಿಯಲ್ಲಿ ಬದಲಾವಣೆ ಮಾಡಿ 16.01.2017ರಂದು ಅಧಿಸೂಚನೆ ಹೊರಡಿಸಲಾಗಿದೆ. ಈ ಅಧಿಸೂಚನೆಯಲ್ಲಿ ಸಂಬಂಧಿಕರ ಮಕ್ಕಳನ್ನು ಕೂಡಾ ದತ್ತು ಪಡೆಯಬಹುದಾಗಿದೆ.<br><br>5. ಕರ್ನಾಟಕ ರಾಜ್ಯ ಹೆಣ್ಣುಮಕ್ಕಳ ನೀತಿ–2018ನ್ನು ದಿನಾಂಕ:15.03.2018ರಲ್ಲಿ ಜಾರಿಗೊಳಿಸಲಾಗಿದೆ.<br><br>6. ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಕರ್ನಾಟಕ ರಾಜ್ಯ ಸರ್ಕಾರವು 2009ರ ಜುಲೈನಲ್ಲಿ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವನ್ನು ರಚಿಸಿದೆ.<br><br>The commission for protection of child rights act 2005 (central act no.4 of 2006) 'The Karnataka State Commission for Protection of Child Rights Rules 2010ನ್ನು ರಚಿಸಲಾಗಿದ್ದು, ಅದರಂತೆ ಆಯೋಗವು ಕಾರ್ಯನಿರ್ವಹಿಸುತ್ತಿದೆ.<br><br>7. ಬಾಲ್ಯವಿವಾಹ ನಿಷೇಧ(ಕರ್ನಾಟಕ) ನಿಯಮಗಳು, 2016 ಬಾಲ್ಯವಿವಾಹ ನಿಷೇಧ ಅಧಿನಿಯಮ 2006 ಕ್ಕೆ ಸಂಬಂಧಿಸಿದಂತೆ ತಿದ್ದುಪಡಿಯನ್ನು ತರಲಾಗಿದ್ದು, ಸಂಖ್ಯೆ:ಸಂವ್ಯಶಾಇ 44 ಶಾಸನ 2015, ಬೆಂಗಳೂರು ದಿನಾಂಕ:26.04.2017ರಿಂದ ಜಾರಿಗೊಳಿಸಲಾಗಿದೆ.<br><br><u>ಮಹಿಳೆಯರ ರಕ್ಷಣೆಗಾಗಿ:–</u><br><br>1. ಕರ್ನಾಟಕ ರಾಜ್ಯ ಮಹಿಳಾ ಸಬಲೀಕರಣ ಕಾರ್ಯನೀತಿ–2018ನ್ನು ದಿನಾಂಕ:26–03–2018ರಲ್ಲಿ ಜಾರಿಗೊಳಿಸಲಾಗಿದೆ. |

2.ದುಡಿಯುವ ಸ್ಥಳದಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳ ತಡೆಗಟ್ಟಿ ಸುರಕ್ಷಿತವಾಗಿ ಕೆಲಸ ನಿರ್ವಹಿಸಲು ಅನುಕೂಲಕರ ವಾತಾವರಣ ಕಲ್ಪಿಸುವ ಉದ್ದೇಶದಿಂದ ಮಹಿಳೆಯರ ಮೇಲಿನ **ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಿಕೆ) ಅಧಿನಿಯಮ 2013**ನ್ನು ಜಾರಿಗೆ ತರಲಾಗಿದೆ.

3.ಕೌಟುಂಬಿಕ ಸಂಬಂಧದವರಿಂದ ಮಹಿಳೆಯರ ಮೇಲೆ ನಡೆಯುವ ದೈಹಿಕ, ಲೈಂಗಿಕ, ಭಾವನಾತ್ಮಕ, ಆರ್ಥಿಕ ಹಿಂಸೆಗಳನ್ನು ಅನುಭವಿಸುತ್ತಿರುವ ಮಹಿಳೆಯರನ್ನು ಸಂರಕ್ಷಿಸುವ ಉದ್ದೇಶದಿಂದ **ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ 2005,** ನಿಯಮ 2006ನ್ನು ಜಾರಿಗೆ ತರಲಾಗಿದೆ.

4. ರಾಜ್ಯದಲ್ಲಿ ವರದಕ್ಷಿಣೆ ಪಿಡುಗನ್ನು ದೂರ ಮಾಡುವ ಉದ್ದೇಶದಿಂದ (ವರದಕ್ಷಿಣೆ ಕೇಳುವುದು/ಕೊಡುವುದು/ ತೆಗೆದುಕೊಳ್ಳುವುದು ನಿಷೇಧಿಸುವುದು) **ವರದಕ್ಷಿಣೆ ಅಧಿನಿಯಮ** 1961 ಜಾರಿಗೆ ತರಲಾಗಿದೆ.

5.ನ್ಯಾಯಾಯುತವಾದ ಕಾರಣವಿಲ್ಲದೆ ಪತಿಯು ಪತ್ನಿಯನ್ನು ತ್ಯಜಿಸಿದರೆ ಅಂತಹ ಮಹಿಳೆಯರಿಗೆ ಪತಿಯ ಜೊತೆ ಬಾಳುವಂತೆ ಅವಕಾಶ ಮಾಡುವ ಹಾಗೂ ಮಹಿಳೆಯರ ವಿವಾಹಕ್ಕೆ ಕಾನೂನಿನಲ್ಲಿ ರಕ್ಷಣೆ ಒದಗಿಸುವ ಉದ್ಧೇಶದಿಂದ **ಕರ್ನಾಟಕ ವಿವಾಹಗಳ (ನೋಂದಣಿ ಮತ್ತು ಸಂಕೀರ್ಣ ಉಪಬಂಧಗಳು) ಅಧಿನಿಯಮ 1976**ನ್ನು ಜಾರಿಗೆ ತರಲಾಗಿದೆ.

6.ದೂರದರ್ಶನ / ಜಾಹೀರಾತು ಮತ್ತಿತರ ಕ್ಷೇತ್ರಗಳಲ್ಲಿ ಮಹಿಳೆಯರನ್ನು **ಅಸಭ್ಯ ರೀತಿಯಲ್ಲಿ ಪ್ರತಿಬಿಂಬಿಸುವವರ ವಿರುದ್ಧ ಕ್ರಮ ಕೈಗೊಳ್ಳಲು** ಅಧಿನಿಯಮ 1986ನ್ನು ಜಾರಿಗೆ ತರಲಾಗಿದೆ.

7.ಮಹಿಳೆಯರನ್ನು ಅಕ್ರಮ ಸಾಗಾಣೆ ಮಾಡುವುದನ್ನು ತಡೆಯಲು, ರಕ್ಷಣೆ ನೀಡಲು ಮತ್ತು ನಿರ್ಬಂದಿಸಲು **ಮಹಿಳೆಯರ ಅಕ್ರಮ ಸಾಗಾಣಿಕೆ ನಿಷೇಧ ಕಾಯ್ದೆ 1956**ನ್ನು ಜಾರಿಗೆ ತರಲಾಗಿದೆ.

8.ಕರ್ನಾಟಕದಲ್ಲಿ ದೇವದಾಸಿ ಪದ್ಧತಿಯನ್ನು ನಿರ್ಮೂಲನೆ ಮಾಡಲು **ಕರ್ನಾಟಕ ದೇವದಾಸಿ ನಿರ್ಬಂಧ ಕಾಯ್ದೆ–1982**ನ್ನು ಜಾರಿಗೆ ತರಲಾಗಿದೆ.

ಸಂ:ಮಮಇ 225 ಮಭಾಬ 2018

(ಡಾ. ಜಯಮಾಲ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.

# ಕರ್ನಾಟಕ ವಿಧಾನ ಸಭೆ

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 2051 |
| ವಿಧಾನ ಸಭಾ ಸದಸ್ಯರ ಹೆಸರು | ಶ್ರೀ ಬೋಪಯ್ಯ ಕೆ.ಜಿ (ವಿರಾಜಪೇಟೆ) |
| ಉತ್ತರಿಸುವವರು | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 18.12.2018 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಭಾಗ್ಯಲಕ್ಷ್ಮಿ ಯೋಜನೆಯಡಿ ಬಾಂಡ್ ವಿತರಿಸಲು ಬಾಕಿ ಇರುವ ಪ್ರಕರಣಗಳೆಷ್ಟು; ಕಳೆದ ಎರಡು ವರ್ಷಗಳಿಂದ ನೀಡಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರಗಳನ್ನು ಒದಗಿಸುವುದು) | ಅನುಬಂಧ-1ರಲ್ಲಿ ಒದಗಿಸಿದೆ. |
| ಆ | ಈ ಯೋಜನೆಯ ಅನುಷ್ಠಾನಕ್ಕಾಗಿ ಸರ್ಕಾರ ನಿಗಧಿಪಡಿಸಿರುವ ಮೊತ್ತವೆಷ್ಟು; ಇತ್ತೀಚಿಗೆ ಸದರಿ ಯೋಜನೆಯ ಅನುಷ್ಠಾನದಲ್ಲಿ ಅನಗತ್ಯ ವಿಳಂಬ ಹಾಗೂ ಯೋಜನೆಗೆ ನಿರಾಸಕ್ತಿ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದಕ್ಕೆ ಕಾರಣಗಳೇನು; | 2018-19ನೇ ಸಾಲಿನಲ್ಲಿ ರೂ.309.43 ಕೋಟಿಗಳನ್ನು ನಿಗದಿಪಡಿಸಲಾಗಿದೆ.<br><br>ಫಲಾನುಭವಿಯ ಪೋಷಕರ ಮರಣ ವಿಮೆಯನ್ನು ಆಮ್ ಆದ್ಮಿ ಬಿಮಾ ಯೋಜನೆಯಡಿ ಪಾವತಿಸುತ್ತಿದ್ದು ಸದರಿ ವಿಮೆಯು ಪ್ರಧಾನಮಂತ್ರಿ ಜೀವನಜ್ಯೋತಿ ಬಿಮಾ ಯೋಜನೆಯಡಿ ವಿಲೀನಗೊಂಡ ಹಿನ್ನೆಲೆಯಲ್ಲಿ ಹೆಚ್ಚಾಗಿ ಎಲ್.ಐ.ಸಿಗೆ ಪಾವತಿಸಬೇಕಾದ ವಿಮೆ ಮೊತ್ತದ ಬಗ್ಗೆ ಹಾಗೂ ಈ ವಿವರಗಳನ್ನು ಬಾಂಡ್ ಮೇಲೆ ಮುದ್ರಿಸಬೇಕಾದ್ದರಿಂದ ತೀರ್ಮಾನ ಕೈಗೊಳ್ಳುವ ಕಾರಣದಿಂದಾಗಿ ಬಾಂಡ್ ವಿತರಣೆಯಲ್ಲಿ ವಿಳಂಬವಾಗಿತ್ತು. ನಂತರ ಈ ಬಗ್ಗೆ ಅಗತ್ಯ ಕ್ರಮವಹಿಸಲಾಗಿದ್ದು, ಪ್ರಸ್ತುತ ಎಲ್.ಐ.ಸಿಯಲ್ಲಿ ಬಾಂಡ್‌ಗಳು ಮುದ್ರಣದ ಹಂತದಲ್ಲಿದ್ದು ಶೀಘ್ರದಲ್ಲಿಯೇ ಜಿಲ್ಲಾ ಕೇಂದ್ರಗಳ ಮೂಲಕ ಫಲಾನುಭವಿಗಳಿಗೆ ಬಾಂಡ್ ವಿತರಣೆ ಮಾಡಲಾಗುವುದು. |

| | | |
|---|---|---|
| ಇ | ಸದರಿ ಫಲಾನುಭವಿಗಳ ಆಯ್ಕೆಗಾಗಿ ಕೆಲವೊಂದು ಮಾರ್ಗಸೂಚಿ-ಮಾನದಂಡಗಳನ್ನು ಮಾರ್ಪಾಡಿಸಲು ಸರ್ಕಾರ ಉದ್ದೇಶಿಸಿದೆಯೇ; | ಇಲ್ಲ. |
| ಈ | ಬಾಕಿ ಇರುವ ಬಾಂಡ್ ವಿತರಣೆಯ ಫಲಾನುಭವಿಗಳಿಗೆ ಯಾವಾಗ ಬಾಂಡ್ ವಿತರಿಸಲಾಗುತ್ತದೆ; ವಿಳಂಬಕ್ಕೆ ಕಾರಣಗಳೇನು; | ಭಾರತೀಯ ಜೀವ ವಿಮಾ ನಿಗಮದಲ್ಲಿ ಬಾಂಡ್ ಮುದ್ರಣದ ಹಂತದಲ್ಲಿದ್ದು ಸಧ್ಯದಲ್ಲಿಯೇ ವಿತರಿಸಲಾಗುವುದು. ವಿಳಂಬಕ್ಕೆ ಕಾರಣಗಳನ್ನು ಅಂಶ (ಆ)ರಲ್ಲಿ ವಿವರಿಸಲಾಗಿದೆ. |
| ಉ | ಭಾಗ್ಯಲಕ್ಷ್ಮಿ ಬಾಂಡ್ ಯೋಜನೆಯ ಫಲಾನುಭವಿ ಮೊತ್ತವನ್ನು ಪರಿಷ್ಕರಿಸಲು ಸರ್ಕಾರ ಮುಂದಾಗುವುದೇ; ಎಷ್ಟು ಮೊತ್ತ ನಿಗದಿ ಪಡಿಸಲು ಸರ್ಕಾರ ಉದ್ದೇಶಿಸಿದೆ? (ವಿವರಗಳನ್ನು ಒದಗಿಸುವುದು) | ಇಲ್ಲ. |

ಸಂ:ಮಮಇ 146 ಮಮಅ 2018

(ಡಾ|| ಜಯಮಾಲ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಶ್ರೀ. ಬೋಪಯ್ಯ ಕೆ.ಜಿ ಮಾನ್ಯ ವಿದಾನ ಸಭಾ ಸದಸ್ಯರು, ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.2051ಕ್ಕೆ ಅನುಬಂಧ-1

ಭಾಗ್ಯಲಕ್ಷ್ಮಿ ಯೋಜನೆಯಡಿ ಕಳೆದ 2 ವರ್ಷಗಳಿಂದ ನೋಂದಣಿಯಾದ, ಬಾಂಡ್ ವಿತರಿಸಲಾದ ಮತ್ತು ಬಾಕಿ ಬಾಂಡುಗಳ ವಿವರಗಳು.

| ಕ್ರ.ಸಂ | ಜಿಲ್ಲೆಗಳಹೆಸರು | 2016-17 | | | | | 2017-18 | | |
|---|---|---|---|---|---|---|---|---|---|
| | | ನೋಂದಣಿ | ಬಾಂಡ್ ವಿತರಣೆ | | | ಬಾಕಿ | ನೋಂದಣಿ | ಬಾಂಡ್ ವಿತರಣೆ | ಬಾಕಿ |
| | | | 2016-17 | 2015-16 | ಒಟ್ಟುಸಂಖ್ಯೆ | | | | |
| 1 | ಬಾಗಲಕೋಟೆ | 4842 | 4108 | 0 | 4108 | 734 | 4362 | 950 | 3412 |
| 2 | ಬೆಂಗಳೂರು ನಗರ | 8248 | 5972 | 0 | 5972 | 2276 | 6723 | 1605 | 5118 |
| 3 | ಬೆಂಗಳೂರು(ಗ್ರಾ) | 3095 | 2717 | 0 | 2717 | 378 | 2747 | 676 | 2071 |
| 4 | ಬೆಳಗಾಂ | 12090 | 10555 | 0 | 10555 | 1535 | 12648 | 2673 | 9975 |
| 5 | ಬಳ್ಳಾರಿ | 17668 | 6847 | 0 | 6847 | 10821 | 9196 | 1798 | 7398 |
| 6 | ಬೀದರ್ | 7431 | 6048 | 0 | 6048 | 1383 | 5024 | 3280 | 1744 |
| 7 | ಬಿಜಾಪುರ | 8879 | 6224 | 0 | 6224 | 2655 | 5045 | 1430 | 3615 |
| 8 | ಚಾಮರಾಜ ನಗರ | 3873 | 3326 | 0 | 3326 | 547 | 3604 | 1053 | 2551 |
| 9 | ಚಿಕ್ಕಮಗಳೂರು | 6990 | 3298 | 0 | 3298 | 3692 | 4705 | 708 | 3997 |
| 10 | ಚಿತ್ರದುರ್ಗ | 9598 | 5584 | 0 | 5584 | 4014 | 6331 | 1107 | 5224 |
| 11 | ದಕ್ಷಿಣ ಕನ್ನಡ | 2431 | 2431 | 29 | 2460 | 0 | 2487 | 590 | 1897 |
| 12 | ದಾವಣಗೆರೆ | 6582 | 6582 | 1285 | 7867 | 0 | 6232 | 1571 | 4661 |
| 13 | ಧಾರವಾಡ | 10406 | 7200 | 0 | 7200 | 3206 | 6476 | 1063 | 5413 |
| 14 | ಗದಗ್ | 3961 | 3961 | 694 | 4655 | 0 | 3926 | 796 | 3130 |
| 15 | ಗುಲ್ಬರ್ಗ | 9723 | 9238 | 0 | 9238 | 485 | 6646 | 2424 | 4222 |
| 16 | ಹಾಸನ | 7008 | 6765 | 0 | 6765 | 243 | 5363 | 910 | 4453 |
| 17 | ಹಾವೇರಿ | 14143 | 6714 | 0 | 6714 | 7429 | 8256 | 1371 | 6885 |
| 18 | ಕೊಡಗು | 777 | 734 | 0 | 734 | 43 | 665 | 194 | 471 |
| 19 | ಕೋಲಾರ | 4400 | 4238 | 0 | 4238 | 162 | 3861 | 1061 | 2800 |
| 20 | ಕೊಪ್ಪಳ | 3997 | 3997 | 641 | 4638 | 0 | 3527 | 1343 | 2184 |
| 21 | ಮಂಡ್ಯ | 6137 | 6137 | 705 | 6842 | 0 | 5986 | 1560 | 4426 |
| 22 | ಮೈಸೂರು | 7785 | 7785 | 418 | 8203 | 0 | 8570 | 2521 | 6049 |
| 23 | ರಾಯಚೂರು | 8189 | 7241 | 0 | 7241 | 948 | 5501 | 1891 | 3610 |
| 24 | ಶಿವಮೊಗ್ಗ | 5253 | 5253 | 324 | 5577 | 0 | 5781 | 907 | 4874 |
| 25 | ತುಮಕೂರು | 14967 | 8775 | 0 | 8775 | 6192 | 8807 | 2164 | 6643 |
| 26 | ಉಡುಪಿ | 2927 | 2927 | 9 | 2936 | 0 | 2928 | 702 | 2226 |
| 27 | ಉತ್ತರ ಕನ್ನಡ | 4408 | 4408 | 29 | 4437 | 0 | 5651 | 961 | 4690 |
| 28 | ರಾಮನಗರ | 3345 | 3345 | 459 | 3804 | 0 | 3755 | 860 | 2895 |
| 29 | ಚಿಕ್ಕಬಳ್ಳಾಪುರ | 4267 | 4267 | 374 | 4641 | 0 | 4165 | 1879 | 2286 |
| 30 | ಯಾದಗಿರಿ | 2687 | 2687 | 280 | 2967 | 0 | 2055 | 897 | 1158 |
| | ಒಟ್ಟು | **206107** | 159364 | 5247 | **164611** | 41496 | 161023 | 40945 | 120078 |

ಷರಾ: 2016-17ನೇ ಸಾಲಿನ ಅನುದಾನದಲ್ಲಿ 15-16ನೇ ಸಾಲಿನ 5247 ಫಲಾನುಭವಿಗಳಿಗೆ ಬಾಂಡುಗಳು ವಿತರಣೆಯಾಗಿರುತ್ತವೆ.

**ಕರ್ನಾಟಕ ವಿಧಾನ ಸಭೆ** (1)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1559

ವಿಧಾನ ಸಭಾ ಸದಸ್ಯರ ಹೆಸರು : ಶ್ರೀ.ಉಮಾನಾಥ ಎ.ಕೋಟ್ಯಾನ

ಉತ್ತರಿಸುವವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ಉತ್ತರಿಸಬೇಕಾದ ದಿನಾಂಕ: : 18-12-2018

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| 1 | ಅತ್ಯಾಚಾರ ಪ್ರಕರಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಾರ್ಯಪಡೆ ರಚನೆ ಮತ್ತು ಸುರಕ್ಷತಾ ಮಾರ್ಗಸೂಚಿಗಳ ಪಾಲನೆ ಕುರಿತು ನಿಗಾವಹಿಸುವಲ್ಲಿ ಆದ್ಯತಾ ಕ್ರಮಗಳೇನು; | 1. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು UNICEF ನೆರವಿನಿಂದ **ENFOLD** ಸಂಸ್ಥೆಯ ವತಿಯಿಂದ ಪೋಕ್ಸೋ ಕಾಯ್ದೆ – 2012ರ ಅನುಷ್ಠಾನದ ಬಗ್ಗೆ ಅಧ್ಯಯನ ಕೈಗೊಳ್ಳಲಾಗಿದೆ.<br><br>2. ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರದವತಿಯಿಂದ, ಪ್ರಕರಣಗಳನ್ನು ಶೀಘ್ರವಾಗಿ ಮುಕ್ತಾಯಗೊಳಿಸಲು ಸಾಧ್ಯವಾಗುವಂತೆ ಮಕ್ಕಳು ಮತ್ತು ಪಾಲಕರಿಗೆ ಕಾನೂನು ನೆರವು ನೀಡಲು ಪ್ಯಾರಾ ಲೀಗಲ್ ವಾಲಂಟೀರ್ಸ್(para legal volunteers) ಗಳಿಗೆ ತರಬೇತಿಯನ್ನು ಕೈಗೊಳ್ಳಲಾಗಿದೆ.<br><br>3. ಬೆಂಗಳೂರು(ನಗರ) ಮತ್ತು (ಗ್ರಾಮಾಂತರ) ಜಿಲ್ಲೆಗಳಲ್ಲಿ ಮಕ್ಕಳ ನ್ಯಾಯಾಲಯಗಳನ್ನು ಮಕ್ಕಳ ಸ್ನೇಹಿ ನ್ಯಾಯಾಲಯಗಳನ್ನಾಗಿ ಪರಿವರ್ತಿಸಲಾಗಿದೆ.<br><br>4. 2018–19ನೇ ಸಾಲಿನಲ್ಲಿ 10 ಜಿಲ್ಲೆಗಳ ಮಕ್ಕಳ ನ್ಯಾಯಾಲಯಗಳನ್ನು ಮಕ್ಕಳಸ್ನೇಹಿ ನ್ಯಾಯಾಲಯ ಗಳನ್ನಾಗಿ ಪರಿವರ್ತಿಸಲು ಉದ್ದೇಶಿಸಲಾಗಿದೆ.<br><br>5. ಜೆ.ಜೆ.ಫಂಡ್–"ಅಭಯ ಮಕ್ಕಳ ನಿಧಿ" ರಚಿಸಲಾಗಿದ್ದು, 759 ಮಕ್ಕಳಿಗೆ ರೂ.101.50ಲಕ್ಷಗಳ ನೆರವು ನೀಡಲಾಗಿದೆ.<br><br>6. ಒಂದೇ ಸೂರಿನಡಿ ಆಪ್ತ ಸಮಾಲೋಚನೆ, ಕಾನೂನು ನೆರವು, ವೈದ್ಯಕೀಯ ಚಿಕಿತ್ಸೆ, ಪೋಲೀಸ್ ನೆರವು ಒದಗಿಸಲು ಸಾದ್ಯವಾಗುವಂತೆ ಜಿಲ್ಲಾ ಆಸ್ಪತ್ರೆಗಳಲ್ಲಿ **"ಗೆಳತಿ"** ಎಂಬ ಹೆಸರಿನಲ್ಲಿ ಮಹಿಳೆಯರಿಗಾಗಿ ವಿಶೇಷ ಚಿಕಿತ್ಸಾ ಘಟಕಗಳನ್ನು ರಾಜ್ಯ ಸರ್ಕಾರದಿಂದ ಪ್ರಾರಂಭಿಸಲಾಗಿದ್ದು ಸದರಿ ಯೋಜನೆಯ ಪ್ರಯೋಜನವನ್ನು ಮಕ್ಕಳಿಗೂ ವಿಸ್ತರಿಸಲಾಗಿದೆ. ಸದರಿ ಸೌಲಭ್ಯವನ್ನು 145 ತಾಲೂಕುಗಳಿಗೆ ವಿಸ್ತರಿಸಲು ಉದ್ದೇಶಿಲಾಗಿದೆ. |

| | | |
|---|---|---|
| | | 7. ಕೇಂದ್ರ ಸರ್ಕಾರದಿಂದ ರಾಜ್ಯದ 7 ,ಜಿಲ್ಲೆಗಳಲ್ಲಿ ಮಹಿಳೆ ಮತ್ತು ಮಕ್ಕಳಿಗೆ ಆಪ್ತ ಸಮಾಲೋಚನೆ, ಕಾನೂನು ನೆರವು, ವೈದ್ಯಕೀಯ ಚಿಕಿತ್ಸೆ, ಪೋಲೀಸ್ ನೆರವನ್ನು ಒಂದೇ ಸೂರಿನಡಿ ಒದಗಿಸಲು ಸಾದ್ಯವಾಗುವಂತೆ **"ಒನ್ ಸ್ಟಾಪ್ ಕ್ರೈಸಿಸ್ ಸೆಂಟರ್"** ಪ್ರಾರಂಭಿಸಲಾಗಿದೆ. |
| 2 | ಎಲ್ಲಾ ಶಾಲೆಗಳಲ್ಲಿ ಮಕ್ಕಳು ಸುರಕ್ಷಿತವಾಗಿರುವ ವಾತಾ ವರಣ ಕಲ್ಪಿಸಲು ಸರ್ಕಾರ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳೇನು; ಎಷ್ಟು ಶಾಲೆಗಳಲ್ಲಿ ಮಕ್ಕಳ ಸುರಕ್ಷತೆಗೆ ನಿಯಮಗಳಡಿಯಲ್ಲಿ ಸುರಕ್ಷತೆ ಯನ್ನು ಕಲ್ಪಿಸಿಲ್ಲ ಎಂಬುದನ್ನು ಸರ್ಕಾರ ಗುರುತಿಸಿದೆ; ಮಕ್ಕಳ ಸಂರಕ್ಷಣೆಯ ಗುರುತರ ಹೊಣೆಗಾರಿಕೆಯನ್ನು ಹೊಂದಿರುವ ಇಲಾಖೆಯು ಆ ಕುರಿತು ರೂಪಿಸಿರುವ ಕ್ರಿಯಾ ಯೋಜನೆಗಳು ಯಾವುವು; | **"ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ"-2016ನ್ನು** ಜಾರಿಗೆ ತರಲಾಗಿದ್ದು, ಶೈಕ್ಷಣಿಕ ಸಂಸ್ಥೆಗಳಿಗಾಗಿ ರೂಪಿಸಲಾಗಿರುವ ಕಾರ್ಯನಿರ್ವಹಣಾ ಮಾರ್ಗಸೂಚಿಗಳು ಮತ್ತು ಕಾರ್ಯವಿಧಾನಗಳನ್ನು ಒಳಗೊಂಡಿದೆ. ಸದರಿ ನೀತಿಯನ್ನು ಅನುಷ್ಠಾನಗೊಳಿಸದ ಶಿಕ್ಷಣ ಸಂಸ್ಥೆಗಳಿಗೆ ದಂಡ ವಿಧಿಸಲು ಕರ್ನಾಟಕ ಶಿಕ್ಷಣ ಕಾಯ್ದೆಗೆ ತಿದ್ದುಪಡಿ ತರಲಾಗಿದೆ. ಅಲ್ಲದೆ, ಸದರಿ ನೀತಿಯನ್ನು ಕಾರ್ಯರೂಪಕ್ಕೆ ತರಲು ವಿವಿಧ ಇಲಾಖೆಗಳೊಂದಿಗೆ ಪ್ರಾಥಮಿಕ ಹಂತದ ಸಭೆ ನಡೆಸಲಾಗಿದ್ದು, ಬಾಗೀದಾರರಿಗೆ ಓರಿಯೆಂಟೇಶನ್ ತರಬೇತಿ ಕಾರ್ಯಕ್ರಮ ವನ್ನು ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ.<br>ಶಿಕ್ಷಣ ಇಲಾಖೆಯು ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ 2016ನ್ನು ಸಂಪೂರ್ಣವಾಗಿ ಜಾರಿಗೆ ತರಲು ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ:<br>1. ಕರ್ನಾಟಕ ಶಿಕ್ಷಣ ಕಾಯ್ದೆ 2017 (ಎರಡನೇ ತಿದ್ದುಪಡಿಯಲ್ಲಿ ಮಕ್ಕಳ ಸುರಕ್ಷತಾ ನೀತಿಗೆ ಸಂಬಂಧಿಸಿದ ನಿಯಮಗಳನ್ನು ಅಳವಡಿಸಲಾಗಿದೆ.<br>2. ಶಾಲೆಗಳಲ್ಲಿನ ಮಕ್ಕಳ ಸುರಕ್ಷತೆಯ ಬಗ್ಗೆ ಪರಿಶೀಲಿಸಲು ಹಾಗೂ ಮಾರ್ಗಸೂಚಿ ಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಉನ್ನತಾಧಿಕಾರ ಸಮಿತಿಯನ್ನು ರಚಿಸಿದೆ.<br>3. ಇಲಾಖೆಯ ಶಾಲೆಗಳಲ್ಲಿ ಮಕ್ಕಳ ಸುರಕ್ಷತೆಗಾಗಿ ಶಾಲಾ ವ್ಯಾಪ್ತಿಯ ಪೋಲೀಸ್ ಠಾಣೆಯಲ್ಲಿ ಶಾಲೆಯ ಹೆಸರು, ವಿಳಾಸ, ಆಡಳಿತ ಮಂಡಳಿ, ಶಿಕ್ಷಕರು / ಸಿಬ್ಬಂದಿ ವಿವರಗಳಲನ್ನು ದಾಖಲಿಸಲು ಸೂಚನೆ ನೀಡಿದೆ.<br>4. ಪ್ರತಿ ಶಾಲೆಯಲ್ಲಿ ಮಕ್ಕಳ ಸುರಕ್ಷಾ ಸಮಿತಿ ರಚಿಸಲು ಸೂಚಿಸಿದೆ<br>5. ಈ ಸಂಬಂಧ ಇಲಾಖೆಯಿಂದ ನಿಯಮಿತವಾಗಿ ಸುತ್ತೋಲೆ/ಸಭೆಗಳಲ್ಲಿ ಶಾಲೆಗಳಿಗೆ ಸೂಚನೆ ನೀಡಲಾಗಿದೆ. |
| 3 | ಈಗಾಗಲೇ ಜಾರಿಯಲ್ಲಿರುವ ಸುರಕ್ಷಾ ಮಾರ್ಗಸೂಚಿ ಅನುಷ್ಠಾನ ಸಮನ್ವಯತೆ ಕುರಿತಾದ ಎಷ್ಟು ಸಭೆಗಳು ಇಲಾಖೆಯ ಉಪಸ್ಥಿತಿಯಲ್ಲಿ ನಡೆದಿದೆ; ಎಷ್ಟು ಇಲಾಖೆಗ ಳೊಂದಿಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಈ ಕುರಿತು ಕಾರ್ಯ ನಿರ್ವಹಿಸುತ್ತಿದೆ; ಇಲಾಖೆಯು | **"ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ"-2016** ಜಾರಿಗೆ ತರುವಲ್ಲಿ ಭಾಗೀದಾರ ಇಲಾಖೆಗಳೊಂದಿಗೆ 3 ಬಾರಿ ಸಭೆಗಳನ್ನು ನಡೆಸಲಾಗಿದೆ. |

(3)

| | | |
|---|---|---|
| | ಈವರೆಗೆ ಎಷ್ಟು ಮಾರ್ಗಸೂಚಿ ಉಲ್ಲಂಘನೆ ಪ್ರಕರಣಗಳನ್ನು ಗುರುತಿಸಿ ಕ್ರಮ ಜರುಗಿಸಿದೆ? | ಮಾರ್ಗಸೂಚಿ ಉಲ್ಲಂಘನೆಯ ಪ್ರಕರಣಗಳು ಕಂಡುಬಂದಲ್ಲಿ ಸಂಬಂಧಪಟ್ಟ ಇಲಾಖೆಗಳು ಕ್ರಮ ತೆಗೆದುಕೊಳ್ಳುತ್ತವೆ. |

ಸಂ:ಮಮಇ 226 ಮಭಾಬ 2018

(ಡಾ. ಜಯಮಾಲ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.

# ಕರ್ನಾಟಕ ವಿಧಾನ ಸಭೆ

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1570 |
| ವಿಧಾನ ಸಭಾ ಸದಸ್ಯರ ಹೆಸರು | ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್ |
| ಉತ್ತರಿಸುವವರು | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 18.12.2018 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಳಗಾವಿ ಜಿಲ್ಲೆಯಲ್ಲಿ 2017-18 ಹಾಗೂ 2018-19ನೇ ಸಾಲಿನಲ್ಲಿ ಎಷ್ಟು ಭಾಗ್ಯಲಕ್ಷ್ಮಿ ಬಾಂಡ್‌ಗಳನ್ನು ವಿತರಣೆ ಮಾಡಲಾಗಿದೆ; | ಬೆಳಗಾವಿ ಜಿಲ್ಲೆಯಲ್ಲಿ 2017-18 ನೇ ಸಾಲಿನಲ್ಲಿ 2630 ಬಾಂಡ್‌ಗಳನ್ನು ವಿತರಣೆ ಮಾಡಿದ್ದು 2018-19ನೇ ಸಾಲಿನಲ್ಲಿ ಬಾಂಡ್‌ಗಳು ವಿತರಣೆಯಾಗಿರುವುದಿಲ್ಲ. |
| ಆ | ಈ ಪೈಕಿ ನಿಪ್ಪಾಣಿ ತಾಲ್ಲೂಕಿನಲ್ಲಿ 2017-18 ಹಾಗೂ 2018-19ನೇ ಸಾಲಿನಲ್ಲಿ ಎಷ್ಟು ಭಾಗ್ಯಲಕ್ಷ್ಮಿ ಬಾಂಡ್‌ಗಳನ್ನು ವಿತರಣೆ ಮಾಡಲಾಗಿದೆ; | ಈ ಪೈಕಿ ನಿಪ್ಪಾಣಿ ತಾಲ್ಲೂಕಿನಲ್ಲಿ 2017-18 ನೇ ಸಾಲಿನಲ್ಲಿ 206 ಬಾಂಡ್‌ಗಳನ್ನು ವಿತರಣೆ ಮಾಡಿದ್ದು 2018-19 ನೇ ಸಾಲಿನಲ್ಲಿ ಬಾಂಡ್‌ಗಳು ವಿತರಣೆ ಯಾಗಿರುವುದಿಲ್ಲ. |
| ಇ | ಹಲವಾರು ಫಲಾನುಭವಿಗಳು ಬಿ.ಪಿ.ಎಲ್. ಪಡಿತರ ಚೀಟಿ ವಿತರಣೆಯ ವಿಳಂಬದಿಂದಾಗಿ ಭಾಗ್ಯಲಕ್ಷ್ಮಿ ಯೋಜನೆಯಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರದ ಕೈಗೊಂಡ ಕ್ರಮಗಳೇನು? | ಬಿ.ಪಿ.ಎಲ್. ಪಡಿತರ ಚೀಟಿ ವಿತರಣೆಯ ವಿಳಂಬದಿಂದಾಗಿ ಭಾಗ್ಯಲಕ್ಷ್ಮಿ ಯೋಜನೆಯಿಂದ ಫಲಾನುಭವಿಗಳು ವಂಚಿತರಾಗುತ್ತಿರುವುದು ಗಮನಕ್ಕೆ ಬಂದ ನಂತರ, ಯಾವ ದಿನಾಂಕದಿಂದ ಬಿಪಿಎಲ್ ಕಾರ್ಡ್ ನೀಡುವ ಪ್ರಕ್ರಿಯೆ ಸ್ಥಗಿತಗೊಂಡಿದೆ ಹಾಗೂ ಯಾವಾಗ ಮತ್ತೆ ನೀಡಲು ಪ್ರಾರಂಭಿಸಿರುತ್ತಾರೆ ಎಂಬ ಬಗ್ಗೆ ಮಾಹಿತಿಯನ್ನು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಿಂದ ಪಡೆಯಲಾಗಿತ್ತು. ಅದರಂತೆ 01.07.2016 ರಿಂದ 31.01.2017ರ ಅವಧಿಯಲ್ಲಿ ನೋಂದಣಿಗೆ ಸ್ವೀಕಾರವಾದಂತಹ ಅರ್ಜಿಗಳನ್ನು ದಿನಾಂಕ:23.03.2018 ರವರೆಗೂ ನೋಂದಣಿ ಮಾಡಲು ಅವಕಾಶ ನೀಡಲಾಗಿತ್ತು.<br>ಮೇಲೆ ವಿವರಿಸಲಾದ ಅಂಶದಿಂದಾಗಿ ತೊಂದರೆಗೊಳಗಾದ ಬೆಳಗಾಂ ಜಿಲ್ಲೆಯ 68 ಫಲಾನುಭವಿಗಳಿಗೆ ಸೌಲಭ್ಯ ನೀಡಲಾಗಿದೆ. |

ಸಂ:ಮಮಇ 147 ಮಮಅ 2018

(ಡಾ. ಜಯಮಾಲ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

# ಕರ್ನಾಟಕ ವಿಧಾನ ಸಭೆ

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1265 |
| ಸದಸ್ಯರ ಹೆಸರು | : ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ |
| ಉತ್ತರಿಸುವ ದಿನಾಂಕ | : 18.12.2018 |
| ಉತ್ತರಿಸುವ ಸಚಿವರು | : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಮಂಜೂರಾದ ಹುದ್ದೆ ಹಾಗೂ ಕಳೆದ 3 ವರ್ಷಗಳಲ್ಲಿ ಮುಂಬಡ್ತಿ ನೀಡಿರುವ ಮಾಹಿತಿ ಶೇಕಡವಾರು ಸಲ್ಲಿಸುವುದು;</td><td>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಮಂಜೂರಾದ ಮತ್ತು ಕಳೆದ ಮೂರು ವರ್ಷಗಳಲ್ಲಿ ಮುಂಬಡ್ತಿ ನೀಡಲಾದ ಹುದ್ದೆಗಳ ವಿವರ ಕೆಳಕಂಡಂತಿದೆ.
<table>
<tr><td>ವಿವಿಧ ವೃಂದಗಳಲ್ಲಿ ಮಂಜೂರಾದ ಒಟ್ಟು ಹುದ್ದೆಗಳ ಸಂಖ್ಯೆ</td><td>6262</td></tr>
<tr><td>ಕಳೆದ ಮೂರು ವರ್ಷಗಳಲ್ಲಿ ಮುಂಬಡ್ತಿ ನೀಡಲಾಗಿರುವ ಒಟ್ಟು ಹುದ್ದೆಗಳ ಸಂಖ್ಯೆ</td><td>744</td></tr>
<tr><td>ಶೇಕಡಾವಾರು ಪ್ರಮಾಣ</td><td>11.89%</td></tr>
<tr><td>ಮೇಲ್ವಿಚಾರಕಿ ವೃಂದದಲ್ಲಿ ಮಂಜೂರಾಗಿರುವ ಹುದ್ದೆಗಳ ಸಂಖ್ಯೆ:</td><td>2096</td></tr>
<tr><td>ಹಿರಿಯ ಮೇಲ್ವಿಚಾರಕಿ ವೃಂದದಲ್ಲಿ ಮಂಜೂರಾಗಿರುವ ಹುದ್ದೆಗಳ ಸಂಖ್ಯೆ</td><td>400</td></tr>
<tr><td>ಕಳೆದ ಮೂರು ವರ್ಷಗಳಲ್ಲಿ ಮೇಲ್ವಿಚಾರಕಿಯರ ವೃಂದದಿಂದ ಹಿರಿಯ ಮೇಲ್ವಿಚಾರಕಿ ವೃಂದಕ್ಕೆ ಮುಂಬಡ್ತಿ ನೀಡಲಾದ ನೌಕರರ ಸಂಖ್ಯೆ</td><td>232</td></tr>
<tr><td>ಶೇಕಡಾವಾರು ಪ್ರಮಾಣ</td><td>11.06%</td></tr>
</table>
ವೃಂದವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.</td></tr>
<tr><td>ಆ</td><td>ಕರ್ನಾಟಕ ರಾಜ್ಯಪತ್ರ ಮಾರ್ಚ್ 2013ರಲ್ಲಿ ಹೊರಡಿಸಿದ ಕೇಡರ್ ಮತ್ತು ನೇಮಕಾತಿ ಆದೇಶದಂತೆ ಮಹಿಳೆಯರಿಗೆ ಮೀಸಲಾಗಿರುವ ಮೇಲ್ವಿಚಾರಕಿ ಹುದ್ದೆಯಿಂದ ಹಿರಿಯ ಮೇಲ್ವಿಚಾರಕಿಯೆಂದು</td><td>ಕರ್ನಾಟಕ ರಾಜ್ಯಪತ್ರ ಮಾರ್ಚ್ 2013ರಲ್ಲಿ ಹೊರಡಿಸಿದ ವೃಂದ ಮತ್ತು ನೇಮಕಾತಿ ಆದೇಶದಂತೆ ಹಿರಿಯ ಮೇಲ್ವಿಚಾರಕಿ ವೃಂದದಲ್ಲಿ 400 ಹುದ್ದೆಗಳು ಮಂಜೂರಾಗಿವೆ.</td></tr>
</table>

| | | |
|---|---|---|
| | ಮುಂಬಡ್ತಿ ಪಡೆಯಲು 400 ಹುದ್ದೆಗಳು ಮಂಜೂರಾಗಿವೆಯೇ; | |
| ಇ | ಇದರಲ್ಲಿ, ಎಷ್ಟು ಮಹಿಳಾ ಮೇಲ್ವಿಚಾರಕಿಯರು ಮುಂಬಡ್ತಿ ಪಡೆದಿರುತ್ತಾರೆ; | ಕಳೆದ ಮೂರು ವರ್ಷಗಳಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶದ (ಹೆಚ್‌ಕೆಪಿ) ವೃಂದದಲ್ಲಿ 14 ಮತ್ತು ಉಳಿಕೆ ಮೂಲ ವೃಂದದ (ಎನ್‌ಹೆಚ್‌ಕೆಪಿ) ವೃಂದದಲ್ಲಿ 218 ಒಟ್ಟು 232 ಮೇಲ್ವಿಚಾರಕಿಯರಿಗೆ ಹಿರಿಯ ಮೇಲ್ವಿಚಾರಕಿ ವೃಂದಕ್ಕೆ ಮುಂಬಡ್ತಿ ನೀಡಿ ನೀಡಲಾಗಿದೆ. |
| ಈ | ಉಳಿದ ಮೇಲ್ವಿಚಾರಕಿಯರ ಮುಂಬಡ್ತಿಗೆ ಸರ್ಕಾರ ಕೈಗೊಂಡ ಕ್ರಮವೇನು; (ಸ್ಪಷ್ಟೀಕರಣ ಮತ್ತು ವಿವರವಾದ ಮಾಹಿತಿ ನೀಡುವುದು)? | ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿನ ಶ್ರೀ ಬಿ.ಕೆ. ಪವಿತ್ರ ಮತ್ತು ಇತರರು ವಿರುದ್ಧ ರಾಜ್ಯ ಸರ್ಕಾರ ಮತ್ತು ಇತರರು ಪ್ರಕರಣದಡಿ, ಅಂತಿಮ ಆದೇಶ ಹೊರಡಿಸುವವರೆಗೂ ತಾತ್ಕಾಲಿಕವಾಗಿ ಮುಂಬಡ್ತಿ ನೀಡದಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ನಿರ್ದೇಶನ ಇರುತ್ತದೆ. ಸೂಕ್ತ ನಿರ್ದೇಶನ ಬಂದ ನಂತರ ಅರ್ಹ ನೌಕರರಿಗೆ ಮುಂಬಡ್ತಿ ನೀಡುವ ಮೂಲಕ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ: ಮಮಇ 371 ಎಸ್‌ಜೆಡಿ 2018

(ಡಾ: ಜಯಮಾಲ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ, ಕನ್ನಡ ಮತ್ತು ಸಂಸ್ಕೃತಿ ಸಚಿವರು.

## ಅನುಬಂಧ

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಕಳೆದ ಮೂರು ವರ್ಷದಲ್ಲಿ ಮುಂಬಡ್ತಿ ಮೂಲಕ ಭರ್ತಿಮಾಡಲಾದ ಹುದ್ದೆಗಳ ವೃಂದವಾರು ಮಾಹಿತಿ

| ಕ್ರ.ಸಂ. | ಪದನಾಮ | 2015–16 | 2016–17 | 2017–18 | ಒಟ್ಟು |
|---|---|---|---|---|---|
| 1 | ಜಂಟಿ ನಿರ್ದೇಶಕರು | 4 | 0 | 3 | 7 |
| 2 | ಉಪ ನಿರ್ದೇಶಕರು | 16 | 0 | 0 | 16 |
| 3 | ಹಿರಿಯ ಸಹಾಯಕ ನಿರ್ದೇಶಕರು | 0 | 0 | 0 | 0 |
| 4 | ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು | 64 | 1 | 2 | 67 |
| 5 | ಅಧೀಕ್ಷಕರು ದರ್ಜೆ–1/ಎ.ಸಿ.ಡಿ.ಪಿ.ಓ. | 0 | 63 | 0 | 63 |
| 6 | ಸಂರಕ್ಷಣಾಧಿಕಾರಿಗಳು | 0 | 0 | 0 | 0 |
| 7 | ಅಧೀಕ್ಷಕರು ದರ್ಜೆ–2 | 0 | 111 | 0 | 111 |
| 8 | ಮುಖ್ಯೋಪಾಧ್ಯಾಯರು | 0 | 0 | 0 | 0 |
| 9 | ಪ್ರಥಮ ದರ್ಜೆ ಸಹಾಯಕರು | 120 | 0 | 0 | 120 |
| 10 | ಹಿರಿಯ ಮೇಲ್ವಿಚಾರಕಿ | 0 | 232 | 0 | 232 |
| 11 | ಹಿರಿಯ ಬೆರಳಚ್ಚುಗಾರರು | 0 | 0 | 0 | 0 |
| 12 | ಶೀಘ್ರಲಿಪಿಗಾರರು | 9 | 0 | 0 | 9 |
| 13 | ದ್ವಿ.ದ.ಸ./ ಕಂ.ಬೆರಳಚ್ಚುಗಾರರು | 119 | 0 | 0 | 119 |
| | ಒಟ್ಟು | 332 | 407 | 5 | 744 |

ಒಟ್ಟು ಮಂಜೂರು = 6262

3 ವರ್ಷಗಳಲ್ಲಿ ನೀಡಿರುವ ಬಡ್ತಿ = 744

ಶೇಕಡ = 11.89

# ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2125
ವಿಧಾನ ಸಭಾ ಸದಸ್ಯರ ಹೆಸರು : ಶ್ರೀ ಸಿದ್ದು ಸವದಿ (ತೇರದಾಳ)

ಉತ್ತರಿಸುವವರು : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಉತ್ತರಿಸಬೇಕಾದ ದಿನಾಂಕ : 18-12-2018

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಹೊಸದಾಗಿ ಅಂಗನವಾಡಿಗಳನ್ನು ಪ್ರಾರಂಭಿಸಲು ಇರುವ ನಿಯಮಗಳೇನು; ತೇರದಾಳ ಕ್ಷೇತ್ರದಲ್ಲಿ ಬೇಡಿಕೆಗಳಿದ್ದು, ಯಾವಾಗ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲಾಗುವುದು; | ಕೇಂದ್ರ ಸರ್ಕಾರದ ಪತ್ರದ ದಿನಾಂಕ:16-05-2016ರಲ್ಲಿ ಹೊಸ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲವೆಂದು ತಿಳಿಸಿರುತ್ತಾರೆ. ಪ್ರಸ್ತುತ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ, ಕಡಿಮೆ ಫಲಾನುಭವಿಗಳನ್ನು ಹೊಂದಿರುವ ಅಂಗನವಾಡಿ ಕೇಂದ್ರಗಳನ್ನು ಬೇಡಿಕೆ ಇರುವ ಸ್ಥಳಗಳಿಗೆ ಫಲಾನುಭವಿಗಳ ಲಭ್ಯತೆಯ ಮೇರೆಗೆ ಸ್ಥಳಾಂತರ ಮಾಡಲು ಸೂಚಿಸಿರುತ್ತಾರೆ.<br>ತೇರದಾಳ ಕ್ಷೇತ್ರದಲ್ಲಿ ಈಗಾಗಲೇ 305 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಹೊಸದಾಗಿ ಅಂಗನವಾಡಿ ಕೇಂದ್ರಗಳ ಮಂಜೂರಾತಿ ಕೋರಿ ಬೇಡಿಕೆಗಳು ಸ್ವೀಕೃತವಾಗಿರುವುದಿಲ್ಲ. |
| ಆ | ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳೆಷ್ಟು (ವಿಧಾನಸಭಾ ಕ್ಷೇತ್ರವಾರು ಪೂರ್ಣ ಮಾಹಿತಿ ಒದಗಿಸುವುದು) | ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳು : 65911<br>ವಿಧಾನ ಸಭಾ ಕ್ಷೇತ್ರವಾರು ವಿವರವನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ. |
| ಇ | ಅವುಗಳೆಲ್ಲಕ್ಕೂ ಸ್ವಂತ ಕಟ್ಟಡಗಳಿವೆಯೇ; ಇಲ್ಲವಾದಲ್ಲಿ ಸ್ವಂತ ಕಟ್ಟಡ ಹೊಂದಲು ಎಷ್ಟು ಸಮಯ ಬೇಕಾಗುತ್ತದೆ; | **43328** ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡಗಳಿವೆ.<br>ಸ್ವಂತ ಕಟ್ಟಡಗಳಿಲ್ಲದ ಕೇಂದ್ರಗಳು ಶಾಲೆ, ಪಂಚಾಯತ್, ಸಮುದಾಯ ಭವನ, ಯುವಕ ಮಂಡಲ, ಮಹಿಳಾ ಮಂಡಲ, ಬಾಡಿಗೆ ಕಟ್ಟಡ ಮತ್ತು ಇತರೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ.<br><br>ಸ್ವಂತ ಕಟ್ಟಡಗಳಿಲ್ಲದ ಕೇಂದ್ರಗಳಿಗೆ ಅನುದಾನ ಲಭ್ಯತೆ ಮತ್ತು ನಿವೇಶನ ಲಭ್ಯತೆಗನುಗುಣವಾಗಿ ವಿವಿಧ ಯೋಜನೆಗಳಡಿಯಲ್ಲಿ ಹಂತಹಂತವಾಗಿ ಕಟ್ಟಡಗಳನ್ನು ನಿರ್ಮಾಣ ಮಾಡಲಾಗುತ್ತದೆ. |

| | | |
|---|---|---|
| ಈ | ಇಲಾಖೆಯಿಂದ ನಿರ್ವಹಿಸುವ ಕಾರ್ಯಕ್ರಮಗಳು ಯಾವುವು; ಅವುಗಳು ಹೇಗೆ ನಿರ್ವಹಿಸಲಾಗುತ್ತಿದೆ; | ಇಲಾಖೆಯಲ್ಲಿ ನಿರ್ವಹಿಸುವ ಕಾರ್ಯಕ್ರಮಗಳನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.<br>ಇಲಾಖೆಯ ಮೂಲಕ ಜಾರಿಗೊಳಿಸಲಾಗುತ್ತಿರುವ ವಿವಿಧ ಯೋಜನೆ/ಕಾರ್ಯಕ್ರಮಗಳನ್ನು ಜಿಲ್ಲಾಮಟ್ಟದ ಹಾಗೂ ತಾಲ್ಲೂಕು ಮಟ್ಟದ ಇಲಾಖಾ ಕಛೇರಿಗಳ ಮೂಲಕ ಸಮರ್ಪಕವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. |
| ಉ | ಮಕ್ಕಳು ಮತ್ತು ಬಾಣಂತೀಯರಿಗೆ ಯಾವ ಪೌಷ್ಠಿಕ ಆಹಾರ ಒದಗಿಸಲಾಗುವುದು; ಎಲ್ಲ ಯೋಜನೆಗಳನ್ನು ಯಾರ ಮುಖಾಂತರ ಜಾರಿಗೆ ತರಲಾಗುತ್ತಿದೆ; | 6 ತಿಂಗಳಿನಿಂದ 3 ವರ್ಷದ ಮಕ್ಕಳಿಗೆ ವಾರದಲ್ಲಿ 5 ದಿನ ಕ್ಷೀರ ಭಾಗ್ಯ ಯೋಜನೆಯಡಿಯಲ್ಲಿ 150 ಎಂ.ಎಲ್ ಹಾಲನ್ನು ನೀಡಲಾಗುವುದು.<br>3-6 ವರ್ಷದ ಮಕ್ಕಳಿಗೆ ವಾರದಲ್ಲಿ 2 ದಿನ ಮೊಟ್ಟೆಯನ್ನು ನೀಡಲಾಗುವುದು.<br>ಸಮಗ್ರ ಶಿಶುಅಭಿವೃದ್ಧಿ ಯೋಜನೆಯಡಿಯಲ್ಲಿ 3ರಿಂದ 6 ವರ್ಷದ ಮಕ್ಕಳಿಗೆ ಮೊಳಕೆ ಭರಿಸಿದ ಕಾಳು/ಶೇಂಗಾ ಬೀಜದ ಚಿಕ್ಕಿ, ಅನ್ನ ಸಾಂಬಾರ್/ ಚಿತ್ರಾನ್ನ/ ಗೋಧಿ/ರವೆ ಪಾಯಸ ನೀಡಲಾಗುತ್ತಿದೆ.<br>ಗರ್ಭಿಣಿ ಬಾಣಂತಿಯರಿಗೆ ಮಾತೃಪೂರ್ಣ ಯೋಜನೆಯಡಿ ಬಿಸಿಯೂಟವನ್ನು ನೀಡುತ್ತಿದ್ದು ಅದರಲ್ಲಿ ಅನ್ನ ಸಾಂಬಾರ್, ಪಲ್ಯ ಜೊತೆಗೆ ಬೇಯಿಸಿದ ಮೊಟ್ಟೆ ಹಾಲು, ಮತ್ತು ಶೇಂಗಾ ಚಿಕ್ಕಿಯನ್ನು ನೀಡಲಾಗುತ್ತದೆ.<br>6 ತಿಂಗಳಿನಿಂದ 3 ವರ್ಷದ ಮಕ್ಕಳಿಗೆ ನ್ಯೂಟ್ರಿಮಿಕ್ಸ್ /ಪೌಷ್ಠಿಕ ಆಹಾರ ನೀಡಲಾಗುತ್ತಿದೆ.<br>ಈ ಯೋಜನೆಯನ್ನು ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿಯಲ್ಲಿ ಅಂಗನವಾಡಿ ಕೇಂದ್ರಗಳ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ. |
| ಊ | ಅಂಗನವಾಡಿ ಸಹಾಯಕಿಯರು ಮತ್ತು ಕಾರ್ಯಕರ್ತೆಯರನ್ನು ಭರ್ತಿ ಮಾಡಲು ಇರುವ ನಿಯಮಗಳಾವುವು? | ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರನ್ನು ಆಯ್ಕೆ ಮಾಡಲು ಸರ್ಕಾರದ ಆದೇಶ ಸಂ.ಮಮಇ: 303 ಐಸಿಡಿ:2017, ದಿ:23.9.2017 ಮತ್ತು ಸೇರ್ಪಡೆ ಆದೇಶ ದಿ:1.12.2017 ರಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ. ಸದರಿ ಸರ್ಕಾರಿ ಆದೇಶದ ಪ್ರತಿಗಳನ್ನು ಅನುಬಂಧಲ್ಲಿ 3 ಮತ್ತು 4 ರಲ್ಲಿ ಒದಗಿಸಲಾಗಿದೆ. |

ಸಂ:ಮಮಇ 351 ಐಸಿಡಿ 2018

(ಡಾ. ಜಯಮಾಲ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ
